ANANTHKUMAR PRATISHTHANA

# ಅನಂತಪಥ

ಪುಟ 9
ಆನಂದಿಬಾಯಿ ಜೋಶಿ
ವ್ಯಕ್ತಿ ವಿಶೇಷ ಮಾಲಿಕೆ



ಸಂಪುಟ - 3 | ಫೆಬ್ರವರಿ - 2023 | ಸಂಚಿಕೆ - 32

## ಸಮಸ್ಯೆಗಳಿಗೆಲ್ಲ ಅನಂತ ಪರಿಹಾರ!

ಅದು ಅನಂತಕುಮಾರ್ ಪರಿಷತ್ತಿನ ರಾಜ್ಯ ಕಾರ್ಯದರ್ಶಿಯಾಗಿದ್ದ ಕಾಲ. ಪರಿಷತ್ತಿನ ಕಾರ್ಯನಿಮಿತ್ತ ಗದಗ್ ಪಟ್ಟಣಕ್ಕೆ ಬಂದ ಅನಂತಕುಮಾರ್ ಪ್ರಹ್ಲಾದ ಇನಾಂದಾರರನ್ನು ಕಾಣಲು ಹೊರಟರು. 1972ರಿಂದಲೇ ವಿದ್ಯಾರ್ಥಿ ಪರಿಷತ್ತಿನ ಸದಸ್ಯರಾಗಿ ಸಕ್ರಿಯರಾಗಿದ್ದ ಪ್ರಹ್ಲಾದ ಇನಾಂದಾರ್, ಗದಗ್ ಪಟ್ಟಣದ ಕಾಲೇಜೊಂದರಲ್ಲಿ ದೈಹಿಕ ಶಿಕ್ಷಣ ಅಧ್ಯಾಪಕರಾಗಿದ್ದರು. ಅನಂತಕುಮಾರ್ ತಮ್ಮೊಡನೆ ಸುಧೀರ್ ಘೋರ್ಪಡೆ, ಸುರೇಶ್ ಮುದ್ದೇಬಿಹಾಳ್ ಮೊದಲಾದ ಕಾರ್ಯಕರ್ತರನ್ನೂ ಕರೆದುಕೊಂಡು ನೇರವಾಗಿ ಇನಾಂದಾರರ ಕಾಲೇಜಿಗೇ ಬಂದುಬಿಟ್ಟರು.

ಕಾಲೇಜಿನ ಅಧ್ಯಾಪಕರ ಕೊಠಡಿಯಲ್ಲಿ ಕುರ್ಚಿಗಳ ಬದಲು ಗಾದಿಯ ವ್ಯವಸ್ಥೆ ಮಾಡಲಾಗಿತ್ತು. ಮೂರು ಗೋಡೆ ಬದಿಗೆ ಗಾದಿ ಅವಕ್ಕೆ ಒರಗಿಕೊಳ್ಳಲು ತೆಕ್ಕೆಗಳು ಇದ್ದವು. ನಡುವೆ ಜಮಖಾನೆ ಹಾಸಿತ್ತು. ಇನಾಂದಾರ್ ತಾವು ಕುಳಿತಲ್ಲಿಗೆ ಬಂದ ಅನಂತಕುಮಾರರನ್ನು ಕಂಡು ಸಂತೋಷದಿಂದ ಸ್ವಾಗತಿಸುತ್ತ ಬರ್ರೀ ಬರ್ರೀ ಎನ್ನುತ್ತ ಗಾದಿಯ ಮೇಲೆ ಕೂರಿಸಲು ಯತ್ನಿಸಿದರು. ಆದರೆ, ಅದಕ್ಕೆ ಸುತರಾಂ ಒಪ್ಪದ ಅನಂತಕುಮಾರ್ ಅದು ಗುರುಗಳ ಸ್ಥಾನ, ನಾ ಅಲ್ಲಿ ಕೂಡಾಂಗಿಲ್ಲ. ನೀವು ಅಲ್ಲಿ ಕೂಡ್ರೀ. ನಾವು ಇಲ್ಲೇ ಕೂಡತೇವಿ ಎನ್ನುತ್ತ ಎದುರಿನ ಜಮಖಾನದ ಮೇಲೆ ಕುಳಿತರು. ಅನಂತಕುಮಾರ್ ತಾವು ಅಲ್ಲಿಗೆ ಬಂದ ಉದ್ದೇಶವನ್ನು ಹೇಳುತ್ತ, ಪ್ರಹ್ಲಾದ ಇನಾಂದಾರ್ ಅವರು ಗದಗ ವಿಭಾಗದ ಪರಿಷತ್ತಿನ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಬೇಕೆಂದು ಕೇಳಿಕೊಂಡರು.

ಆಗ ಗದಗ ಪ್ರದೇಶದಲ್ಲಿ ಕಾಂಗ್ರೆಸ್ಸಿನದೇ ಪ್ರಾಬಲ್ಯ. ಹೆಚ್.ಕೆ. ಪಾಟೀಲ್ ಅವರ ಗುಂಪು ಪ್ರಬಲವಾಗಿತ್ತು. ಕಾಲೇಜಿನ ಆಡಳಿತಮಂಡಳಿಯವರೂ ಕಾಂಗ್ರೆಸ್ ಪರವಾಗಿದ್ದು, ವಿದ್ಯಾರ್ಥಿ ಪರಿಷತ್ತಿನ ಚಟುವಟಿಕೆಗಳನ್ನು ನಡೆಸಹೊರಟರೆ ಸುಮ್ಮನಿರುತ್ತಾರೆಯೇ? ಇದೇ ತಾನೇ ಕೆಲಸಕ್ಕೆ ಸೇರಿರುವ ತನ್ನ ಉದ್ಯೋಗಕ್ಕೆ ಎಲ್ಲಿ ಸಂಚಕಾರ ಬರುವುದೋ ಎಂದು ಇನಾಂದಾರರಿಗೆ ಆತಂಕ.

ಅಂತೂ ಅನಂತಕುಮಾರರ ಒತ್ತಾಯಕ್ಕೆ ಇನಾಂದಾರ್ ಅಧ್ಯಕ್ಷರಾಗಲು ಒಪ್ಪಿದರು. ಪರಿಷತ್ತಿನ ಚಟುವಟಿಕೆಗಳಿಗೆ ವಿದ್ಯಾರ್ಥಿಗಳು ಬರುವುದೂ ಕಷ್ಟವಿತ್ತು. ಆಡಳಿತ ಮಂಡಳಿಯ ಒತ್ತಡದ ದೆಸೆಯಿಂದ ವಿವಿಧ ಕಾಲೇಜುಗಳ ಉಪನ್ಯಾಸಕರು ತಮ್ಮ ವಿದ್ಯಾರ್ಥಿಗಳನ್ನು ಪರಿಷತ್ತಿನ ಚಟುವಟಿಕೆಗಳಿಗೆ ಹೋಗದಂತೆ ತಡೆಯುತ್ತಿದ್ದರು. ಬರುತ್ತಿದ್ದ ಕೆಲವು ವಿದ್ಯಾರ್ಥಿಗಳೂ ಅಂಜಿಕೆಯಿಂದಲೇ ಇರುವಂತೆ ತೋರುತ್ತಿದ್ದರು. ಪುಟ 6 ರಲ್ಲಿ ಮುಂದುವರೆದಿದೆ



## ನಿಮ್ಮ ಜೀವದಯೆ ಪಕ್ಷಿಗಳಿಗೆ ಮಾರಕವಾಗದಿರಲಿ!




ಬೆಂಗಳೂರೂ ಸೇರಿದಂತೆ ಅನೇಕ ನಗರಗಳಲ್ಲಿ ಪ್ರಾಣಿ, ಪಕ್ಷಿ ಮತ್ತು ಪರೋಪಕಾರಿ ಕೀಟಗಳಿಗೆ ಮಾರಕ ವಾತಾವರಣ ಈಗಾಗಲೇ ಸೃಷ್ಟಿಯಾಗಿದೆ. ಪರಿಸರ ಪ್ರೇಮಿಗಳೆಲ್ಲರೂ ಈ ಬೆಳವಣಿಗೆಯನ್ನು ಗಮನಿಸಿ ಕಳವಳವನ್ನು ವ್ಯಕ್ತಪಡಿಸಿದ್ದಾರೆ. ನಗರಗಳಲ್ಲಿ ಮರಗಳ ನಾಶ, ಕುಡಿಯುವ ನೀರಿನ ಕೊರತೆ, ಹೆಚ್ಚುತ್ತಿರುವ ತಾಪಮಾನ, ಗಾಜಿನ ಹೊದಿಕೆಯ ಕಟ್ಟಡಗಳು, ಮೊಬೈಲ್ ಗೋಪುರಗಳು....... ಹೀಗೆ ಹತ್ತು ಹಲವು ಕಾರಣಗಳನ್ನು ಈ ನಿಟ್ಟಿನಲ್ಲಿ ಪಟ್ಟಿ ಮಾಡಬಹುದು. ಇವುಗಳ ಜೊತೆ, ನಾವು ಪಶು, ಪಕ್ಷಿಗಳ ಮೇಲಿನ ಕಾರುಣ್ಯದಿಂದ ನೈಸರ್ಗಿಕವಲ್ಲದ, ಒಗ್ಗದ, ಅಹಿತಕರವಾದ ಆಹಾರವನ್ನು ಹಾಕುವುದೂ ಅವುಗಳಿಗೆ ಮಾರಕವಾದೀತು ಎಂದರೆ ಅಚ್ಚರಿಯಾಗುವುದಲ್ಲವೆ?

ಕೆಲವೊಂದು ಪದಾರ್ಥಗಳನ್ನು ಅರಗಿಸಿಕೊಳ್ಳುವ ಜೀರ್ಣಾಂಗ ವ್ಯವಸ್ಥೆಯೇ ಪಕ್ಷಿಗಳಿಗಿರುವುದಿಲ್ಲ. ಪಕ್ಷಿಗಳ ಜೀವನ ಕ್ರಮದ ಪರಿಚಯವಿಲ್ಲದ ಜನಸಾಮಾನ್ಯರು ತಾವು ಸೇವಿಸುವ ಬ್ರೆಡ್, ಬಿಸ್ಕೆಟ್ ಮುಂತಾದ ಸಿದ್ಧ ಆಹಾರವನ್ನೇ ಅವುಗಳಿಗೂ ನೀಡುತ್ತಾರೆ. ಇಂತಹ ಆಹಾರಗಳಿಗೆ ಅನಿವಾರ್ಯವಾಗಿ ಒಗ್ಗಿಕೊಂಡ ಪ್ರಾಣಿ ಪಕ್ಷಿಗಳು ದುರ್ಬಲವಾಗಬಹುದು. ಜೊತೆಗೆ, ವಂಶವಾಹಿಗಳೇ ರೂಪಾಂತರಗೊಂಡು ಅವುಗಳ ಸಂತತಿ ಕ್ರಮೇಣ ನಾಶವಾಗಬಹುದು. ಪ್ರಾಣಿ ಪಕ್ಷಿಗಳು ತಮ್ಮ ನೈಸರ್ಗಿಕ ಆಹಾರ ಕ್ರಮವನ್ನು ಮರೆತರೆ ಆಹಾರ ಸರಪಳಿಯಲ್ಲಿ ವ್ಯತ್ಯಯ ಉಂಟಾಗಿ ಕ್ರಮೇಣ ಅನೇಕ ಸಂತತಿಗಳೇ ನಷ್ಟವಾಗಬಹುದು. ಆಹಾರವನ್ನು ಸಹಜವಾಗಿ ಸಂಪಾದಿಸುವ ಅಭ್ಯಾಸಬಲದಿಂದ ಬೇರೆ ಬೇರೆ ಸ್ಥಳಗಳಿಗೆ ವಲಸೆ ಹೋಗುವುದನ್ನು ಮರೆತು ಪ್ರಾಣಿ-ಪಕ್ಷಿಗಳು ನಾವು ನೀಡುವ ಆಹಾರಕ್ಕಾಗಿ ಕಾದು ಕುಳಿತುಕೊಳ್ಳುತ್ತಿವೆ. ಒಂದೆಡೆಯಿಂದ ಇನ್ನೊಂದೆಡೆಗೆ ಪ್ರಯಾಣ ಮಾಡುವ ಪ್ರಾಣಿ ಪಕ್ಷಿಗಳು ಬೀಜ ಪ್ರಸಾರವನ್ನು ಮಾಡುವುದರಿಂದ ಅವು ಒಂದೇ ಕಡೆ ನೆಲೆ ನಿಂತರೆ ಬೀಜ ಪ್ರಸಾರದ ನೈಸರ್ಗಿಕ ಕ್ರಿಯೆಯಲ್ಲಿ ಕೂಡ ಏರುಪೇರು ಉಂಟಾಗುತ್ತದೆ. ಮಾನವರ ಆಹಾರಗಳಿಗೆ ಒಗ್ಗಿಕೊಂಡ ಪ್ರಾಣಿ ಪಕ್ಷಿಗಳು ಆಹಾರಕ್ಕಾಗಿ ಮಕ್ಕಳ ಮೇಲೆ ದಾಳಿ ಮಾಡುವ ಪ್ರವೃತ್ತಿ ಹೆಚ್ಚಾಗಿರುವುದನ್ನು ಅನೇಕ ತೀರ್ಥಕ್ಷೇತ್ರಗಳಲ್ಲಿ ಗಮನಿಸಿರುತ್ತೀರಿ. ಪುಟ 7 ರಲ್ಲಿ ಮುಂದುವರೆದಿದೆ




ಅನಂತ ಪಥ ಮಾಸ ಪತ್ರಿಕೆಯ 31 ನೇ ಸಂಚಿಕೆಯನ್ನು ಏರ್ ಮಾರ್ಷಲ್ ಫಿಲಿಪ್ ರಾಜಕುಮಾರ್ ಅವರು ಜನವರಿ 22-01-2023 ರಂದು ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ಪದ್ಮಶ್ರೀ ಕೆ. ಎಸ್. ಜಯಲಕ್ಷ್ಮಿ, ಡಾ. ಗಣಪತಿ ಭಟ್, ಶ್ರೀಮತಿ ತೇಜಸ್ವಿನಿ ಅನಂತಕುಮಾರ್, ಟಿ. ಎಸ್. ಗೋಪಾಲ್ ಮೊದಲಾದವರು ಉಪಸ್ಥಿತರಿದ್ದರು.

# ಉಡುಪಿ ಜಿಲ್ಲೆಯ ಹಲವು ದೇವಾಲಯಗಳು

ದೇಗುಲದರ್ಶನ ಮಾಲಿಕೆ - 19















ದೇಗುಲ ದರ್ಶನ ಮಾಲಿಕೆಯಲ್ಲಿ ಈಗ ಉಡುಪಿ ಜಿಲ್ಲೆಯ ಹಲವು ದೇವಾಲಯಗಳ ಪರಿಚಯ ಮಾಡಿಕೊಳ್ಳೋಣ. ಈ ಪ್ರಾಂತ್ಯದ ನೂರಾರು ದೇವಾಲಯಗಳಲ್ಲಿ ಶೈವ, ವೈಷ್ಣವ ದೇವತೆಗಳು, ಜಿನ ತೀರ್ಥಂಕರರೇ ಅಲ್ಲದೆ, ಬೊಬ್ಬರ್ಯ, ಪಂಜುರ್ಲಿ ಮೊದಲಾದ ಸ್ಥಳೀಯ ದೈವಗಳೂ ಜನರ ಭಕ್ತ್ಯಾದರಗಳಿಗೆ ಪಾತ್ರರಾಗಿದ್ದಾರೆ.

ಉಡುಪಿಯಿಂದ 13 ಕಿಮೀ ದೂರವಿರುವ ಬ್ರಹ್ಮಾವರದಲ್ಲಿ ಸುಪ್ರಸಿದ್ಧ ಮಹಾಲಿಂಗೇಶ್ವರ ದೇವಾಲಯವಿದೆ. ಅಳುಪ ಅರಸರ ಆಳ್ವಿಕೆಯ ಕಾಲ ಎಂದರೆ ಸುಮಾರು ಹತ್ತನೆಯ ಶತಮಾನದಲ್ಲಿ ನಿರ್ಮಾಣವಾಗಿರಬಹುದಾದ ದೇಗುಲವಿದು. ಗಜಪೃಷ್ಠಾಕಾರದ ದೇವಾಲಯದ ಪರಿಸರ ಮನೋಹರವಾಗಿದೆ. ಗರ್ಭಗುಡಿಗೆ ಅಭಿಮುಖವಾಗಿರುವ ಮಂಟಪದಲ್ಲಿ ಕುಳಿತ ನಂದಿ, ಮಹಾಲಿಂಗೇಶ್ವರನೆಂಬ ಹೆಸರಿನ ಶಿವಲಿಂಗ ಎಲ್ಲವೂ ಭವ್ಯವಾಗಿವೆ. ಬ್ರಹ್ಮಾವರದಿಂದ ಐದು ಕಿಮೀ ದೂರದಲ್ಲಿರುವ ಸಾಲಿಕೇರಿಯಲ್ಲಿ ವೀರಭದ್ರ ಹಾಗೂ ದುರ್ಗಾಪರಮೇಶ್ವರಿ ದೇವಾಲಯವಿದೆ. ಚತುರ್ಭುಜಗಳಲ್ಲಿ ನಾನಾ ಆಯುಧಗಳನ್ನು ಧರಿಸಿದ ವೀರಭದ್ರ, ಶಂಖಚಕ್ರಗಳನ್ನು ಹಿಡಿದ ವೈಷ್ಣವಿ ದುರ್ಗೆ, ವಿನಾಯಕ ಮೊದಲಾದ ವಿಗ್ರಹಗಳು ಎತ್ತರದಲ್ಲಿ ಕಿರಿದಾಗಿದ್ದರೂ ಆಕರ್ಷಕವಾಗಿವೆ.

ಮುಂದೆ ರಾಷ್ಟ್ರೀಯ ಹೆದ್ದಾರಿಯಲ್ಲಿ ಕೋಟ ಗ್ರಾಮದ ಸಮೀಪ ಹಂದಟ್ಟು ಎಂಬಲ್ಲಿ ವಿಷ್ಣುಮೂರ್ತಿ ಮತ್ತು ವಿನಾಯಕ ದೇವಸ್ಥಾನವಿದೆ. ಹಂದೆ ಮನೆತನದವರು ಸ್ಥಾಪಿಸಿದ ಈ ಗುಡಿಯಲ್ಲಿ ವಿಷ್ಣು ಮತ್ತು ಗಣೇಶರ ಪುರಾತನ ಶಿಲ್ಪಗಳನ್ನಿರಿಸಿ ಪೂಜಿಸಲಾಗುತ್ತಿದೆ. ಕೋಟ ಗ್ರಾಮಕ್ಕೆ ಹೊಂದಿಕೊಂಡಂತಿರುವ ಸಾಲಿಗ್ರಾಮದಲ್ಲಿ ಶ್ರೀ ಗುರುನರಸಿಂಹ ದೇವಾಲಯವಿದೆ. ನಾಡಿನ ಅತಿ ಪ್ರಾಚೀನ ನರಸಿಂಹ ದೇವಾಲಯಗಳಲ್ಲಿ ಇದೂ ಒಂದು. ಕದಂಬರ ಕಾಲ (5 ನೇ ಶತಮಾನ)ಕ್ಕೆ ಸೇರಿದ ಈ ಗುಡಿಯಲ್ಲಿ ದ್ವಿಭುಜ ನರಸಿಂಹನ ಅಪೂರ್ವ ಶಿಲ್ಪವಿದೆ. ಈ ದೇವಾಲಯದ ಎದುರಾಗಿ ಹೆದ್ದಾರಿಯ ಇನ್ನೊಂದು ಬದಿಯಲ್ಲಿರುವ ಆಂಜನೇಯನ ಗುಡಿಯಿದೆ. ಈ ವಿಗ್ರಹವು 16ನೇ ಶತಮಾನದಷ್ಟು ಪುರಾತನವಾದದ್ದು. ಕೋಟದಲ್ಲಿರುವ ಶ್ರೀ ಮಹಾಲಿಂಗೇಶ್ವರ ದೇವಾಲಯವು 10ನೇ ಶತಮಾನಕ್ಕೆ ಸೇರಿದ ನಿರ್ಮಿತಿ. ಗಜಪೃಷ್ಠಾಕಾರದ ಗುಡಿ ವಿಶಾಲವಾದ ಆವರಣದಲ್ಲಿದೆ. ಶಿವಲಿಂಗವೂ, ಎದುರಿನ ಮಂಟಪದಲ್ಲಿರುವ ನಂದಿಯ ಶಿಲ್ಪವೂ ಆಕರ್ಷಕವಾಗಿವೆ. ಕೋಟ ಗ್ರಾಮಕ್ಕೆ ಹೊಂದಿಕೊಂಡಂತೆಯೇ ಅಮೃತೇಶ್ವರಿ ದೇವಾಲಯವಿದೆ. ಇದನ್ನು 'ಹಲವು ಮಕ್ಕಳ ತಾಯಿ'ಯ ದೇವಾಲಯ ಎಂದೂ ಕರೆಯುತ್ತಾರೆ. ಈ ಗುಡಿಯ ಆವರಣದಲ್ಲಿ ಶಿವಲಿಂಗದ ಆಕೃತಿಯ ಕಲ್ಲುಗಳು ಅಸಂಖ್ಯವಾಗಿ ಕಂಡುಬರುವುದರಿಂದ ಈ ಹೆಸರು ಬಂದಿರಬಹುದು. ಇದೊಂದು ನಾಥಪಂಥದ ದೇವಾಲಯವಾಗಿದ್ದು, 14 ನೇ ಶತಮಾನದ್ದೆಂದು ಊಹಿಸಲಾಗಿದೆ. ಇಲ್ಲಿಯೇ ಪಕ್ಕದಲ್ಲಿ ವೀರಭದ್ರನ ಗುಡಿಯೂ, ಬೊಬ್ಬರ್ಯ ಮೊದಲಾದ ಸ್ಥಳೀಯ ದೈವಗಳ ಗುಡಿಯೂ ಇವೆ.

ಕೋಟದಿಂದ 12 ಕಿಮೀ ದೂರದಲ್ಲಿರುವ ಬಾರಕೂರು ದೇವಾಲಯಗಳ ಕ್ಷೇತ್ರವೆಂದೇ ಪ್ರಸಿದ್ಧ. ಇಲ್ಲಿ ನೂರಾರು ದೇವಾಲಯಗಳಿರುವುದೇ ವಿಶೇಷ. ಇಲ್ಲಿನ ಶ್ರೀ ಬಟ್ಟೆ ವಿನಾಯಕ ದೇವಾಲಯವು 5-6ನೇ ಶತಮಾನದಷ್ಟು ಪುರಾತನವಾದುದು. ಇಲ್ಲಿನ ಇನ್ನೊಂದು ಪ್ರಾಚೀನ ಗುಡಿಯಾದ ಶ್ರೀ ಪಂಚಲಿಂಗೇಶ್ವರ ದೇವಾಲಯವು ಅಳುಪರ ಆಳ್ವಿಕೆಯ ಕಾಲದ್ದಾಗಿದ್ದು, 7-8 ನೇ ಶತಮಾನದಷ್ಟು ಹಳೆಯದು. ಇಲ್ಲಿಯೂ ಗಜಪೃಷ್ಠಾಕಾರದ ಗುಡಿಯಲ್ಲಿ ಶಿವಲಿಂಗವಿದೆ. ಪಾರ್ವತಿ, ವಿನಾಯಕ, ಸೂರ್ಯ, ಸ್ಕಂದ, ನಂದಿ ಮೊದಲಾದ ಪ್ರಾಚೀನ ವಿಗ್ರಹಗಳು ದರ್ಶನೀಯವಾಗಿವೆ. ಉಡುಪಿಯಿಂದ 41 ಕಿಮೀ ದೂರದಲ್ಲಿರುವ ಕಾರ್ಕಳದ ಬಾಹುಬಲಿಯ ವಿಗ್ರಹ ಪ್ರಸಿದ್ಧವಾದುದುದು. 42 ಅಡಿ ಎತ್ತರದ ಈ ಏಕಶಿಲಾ ವಿಗ್ರಹವನ್ನು 1432ರಲ್ಲಿ ಮುಮ್ಮಡಿ ವೀರಪಾಂಡ್ಯನೆಂಬ ಅರಸನು ನಿರ್ಮಿಸಿದನು. ಬಾಹುಬಲಿಯ ಹಿಂಭಾಗದಲ್ಲಿರಿಸಿರುವ ತೀರ್ಥಂಕರರ ವಿಗ್ರಹಗಳೂ, ಮುಂಭಾಗದ ಸ್ತಂಭದ ಮೇಲಿನ ಬ್ರಹ್ಮಯಕ್ಷನ ಶಿಲ್ಪವೂ ನೋಡತಕ್ಕವು.

ಇಲ್ಲೇ ಸಮೀಪವಿರುವ ಚತುರ್ಮುಖ ಬಸದಿಯೂ ಪ್ರೇಕ್ಷಣೀಯವಾಗಿದ್ದು, ವಿಜಯನಗರ ಕಾಲದಲ್ಲಿ ನಿರ್ಮಿತವಾದ ಕಟ್ಟಡವಾಗಿದೆ. ಕಾರ್ಕಳದ ವೆಂಕಟರಮಣ ದೇವಾಲಯಕ್ಕೆ ಅಧಿಕಸಂಖ್ಯೆಯಲ್ಲಿ ಭಕ್ತರು ಭೇಟಿನೀಡುತ್ತಾರೆ. ಇಲ್ಲಿನ ಇನ್ನೊಂದು ಪ್ರಸಿದ್ಧ ಗುಡಿ ಅನಂತಪದ್ಮನಾಭ ದೇವಾಲಯ. ಭೈರರಸರ ಆಳ್ವಿಕೆಯಲ್ಲಿ 16ನೇ ಶತಮಾನದಲ್ಲಿ ಕಟ್ಟಲಾದ ಈ ಗುಡಿಯಲ್ಲಿರುವ ಶೇಷಶಾಯಿ ವಿಷ್ಣುವಿನ ವಿಗ್ರಹ ಆಕರ್ಷಕವಾದುದು. ಕಾರ್ಕಳದಿಂದ 24 ಕಿಮೀ ದೂರದ ವರಂಗ ಒಂದು ಪ್ರಸಿದ್ಧ ಜೈನಕ್ಷೇತ್ರ. ಇಲ್ಲಿನ ನೇಮಿನಾಥ ಬಸದಿ 12 ನೇ ಶತಮಾನದಷ್ಟು ಪುರಾತನವಾದುದು. ಇಲ್ಲಿರುವ ಸರೋವರದ ನಡುವೆ ಕಟ್ಟಲಾದ ಕೆರೆಬಸದಿ ಮನೋಹರವಾದ ಪ್ರೇಕ್ಷಣೀಯ ತಾಣವೂ ಹೌದು. ದೋಣಿಯ ಮೂಲಕ ತಲುಪಬೇಕಾದ ಈ ಬಸದಿಯಲ್ಲಿ ತೀರ್ಥಂಕರ ಮೂರ್ತಿಗಳಿವೆ.

**ಟಿ.ಎಸ್. ಗೋಪಾಲ್/ ಕೆಂಗೇರಿ ಚಕ್ರಪಾಣಿ**

ಈ ಕಾರ್ಯಕ್ರಮವನ್ನು ಯೂಟ್ಯೂಬ್ ನಲ್ಲಿ ನೋಡಲು ಬೇಕಾದ ಲಿಂಕ್ ಇಲ್ಲಿದೆ:
http://YouTube.com/AnanthkumarPratishthana

## ಅನಂತಯಾನ

ನಿರೂಪಣೆ : ಟಿ.ಎಸ್. ಗೋಪಾಲ್

# ಪುರೋಹಿತರ ಮನೆಯಲ್ಲಿ ಚಕ್ರವರ್ತಿ

### ಅಧ್ಯಾಯ- 8



ಸೂರ್ಯನಾರಾಯಣರಾಯರು ಶ್ರೀಕಂಠಪಂಡಿತ ಎಂಬ ಮೇಧಾವಿ ಹುಡುಗನ ವಿದ್ಯಾಭ್ಯಾಸಕ್ಕೆ ಆಶ್ರಯ ಕಲ್ಪಿಸಿ, ಮೆಡಿಕಲ್ ಶಿಕ್ಷಣ ಕೊಡಿಸಿದರು. ಮುಂದೆ, ಆತನಿಗೇ ತಮ್ಮ ಮಗಳು ಜಯಲಕ್ಷ್ಮಿಯನ್ನು ಕೊಟ್ಟು ಮದುವೆ ಮಾಡಿದರು.

ಶ್ರೀಕಂಠ ಪಂಡಿತರು - ಜಯಲಕ್ಷಮ್ಮ ದಂಪತಿಯ ಮಕ್ಕಳಲ್ಲಿ ಗಿರಿಜಾ ಐದನೆಯವರು. ಹಿರಿಯ ಮಗಳು ರಾಜೇಶ್ವರಿ; ಹೆಸರಾಂತ ಜ್ಯೋತಿಷ ಶಾಸ್ತ್ರಜ್ಞ ಬಿ.ವಿ ರಾಮನ್ ಅವರ ಧರ್ಮಪತ್ನಿ. ಆಮೇಲೆ ಮೂವರು ಗಂಡುಮಕ್ಕಳು: ಎಮ್.ಎಸ್.ಗೋಪಾಲ್. ಇವರು ಹೈಕೋರ್ಟ್ ಸೀನಿಯರ್ ಅಡ್ವೋಕೇಟ್ ಅಲ್ಲದೆ ಬೆಂಗಳೂರು ಲಾ ಕೌನ್ಸಿಲ್ ಅಧ್ಯಕ್ಷರೂ ಆಗಿದ್ದವರು. ಎರಡನೆಯವರು ಪದ್ಮಶ್ರೀ ಪುರಸ್ಕೃತ ಡಾ. ನೀಲಕಂಠರಾವ್. ಇವರೇ ಭಾರತದಲ್ಲಿ ಕುಷ್ಠರೋಗವು ಸಂಪೂರ್ಣ ನಿರ್ಮೂಲವಾಗಲು ಕಾರಣಕರ್ತರಾದ ಮಹನೀಯರು. ಪಂಡಿತರ ಇನ್ನೊಬ್ಬ ಮಗ ಎಮ್.ಎಸ್.ಅನಂತಸ್ವಾಮಿ ಇಂಜಿನಿಯರ್ ಆಗಿದ್ದವರು. ಇವರೆಲ್ಲರ ತಂಗಿಯಾಗಿ ಜನಿಸಿದವಳು ಗಿರಿಜಾ. ಈ ಒಡಹುಟ್ಟಿದವರಲ್ಲಿ ಕೊನೆಯವರು ಜಗದೀಶ ಶಾಸ್ತ್ರಿ. ಗಿರಿಜಾ ಹುಟ್ಟಿದ ಕಾಲಕ್ಕೆ (೧೯೩೨) ಪಂಡಿತರು ಬಾಳೆಹೊನ್ನೂರು ಸರ್ಕಾರಿ ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿದ್ದರು. ಮಗಳು ಹುಟ್ಟಿದಾಗ ಇಟ್ಟಂಥ ಹೆಸರು ದೇವಕನ್ಯಾ. ಗಿರಿಜಾ ಎಂಬುದು ಪ್ರೀತಿಯಿಂದ ಕರೆಯುತ್ತಿದ್ದ ಹೆಸರು.

ಗಿರಿಜಾ ಪ್ರಾಥಮಿಕ ವಿದ್ಯಾಭ್ಯಾಸ ಮುಗಿಸುವ ಹೊತ್ತಿಗೆ ಅವರ ತಂದೆಗೆ ತಿಪಟೂರಿಗೆ ವರ್ಗವಾಗಿತ್ತು. ಅಲ್ಲಿ ಹೈಸ್ಕೂಲ್ ಶಿಕ್ಷಣ ಮುಗಿಸಿ ನಂತರ ಬೆಂಗಳೂರಿಗೆ ಬಂದರು. ಅಲ್ಲಿ ಜೈಲಿನ ಮೆಡಿಕಲ್ ಸೂಪರಿಂ ಟೆಂಡೆಂಟ್ ಆಗಿ ಸೇವೆ ಸಲ್ಲಿಸುತ್ತಿದ್ದರು. ಶ್ರೀಕಂಠಪಂಡಿತರು ಬೆಂಗಳೂರಿಗೆ ಬಂದ ಮೇಲೆ ೧೯೪೦ರ ಸುಮಾರಿಗೆ ಶೇಷಾದ್ರಿಪುರಂನ ಎನ್.ಎಸ್. ಅಯ್ಯಂಗಾರ್ ಸ್ಟ್ರೀಟ್ ಎಂಬ ಬೀದಿಯಲ್ಲಿ ಮನೆ ಕಟ್ಟಿ ತಮ್ಮ ಬದುಕಿನ ಕಡೆಯವರೆಗೂ (೧೯೬೪) ಅಲ್ಲೇ ಇದ್ದರು.

ಗಿರಿಜಾ ಬೆಂಗಳೂರಿನ ಮಹಾರಾಣಿ ಕಾಲೇಜಿನಲ್ಲಿ ಪದವಿ ತರಗತಿಗೆ ಸೇರಿ ಶಿಕ್ಷಣ ಮುಂದುವರಿಸಿದರು. ಧೈರ್ಯಶಾಲಿ ಯುವತಿಯಾಗಿದ್ದ ಗಿರಿಜಾ ಓದಿನಲ್ಲೂ ಪಠ್ಯೇತರ ಚಟುವಟಿಕೆಗಳಲ್ಲೂ ಸದಾ ಮುಂದು. ಹಲವಾರು ಚರ್ಚಾಸ್ಪರ್ಧೆಗಳಲ್ಲಿ ಭಾಗವಹಿಸಿ ಸಾಕಷ್ಟು ಬಹುಮಾನಗಳನ್ನೂ ಪಡೆದಿದ್ದರು. ಐದು ಅಡಿ ಎತ್ತರವಿದ್ದರೂ ಅಪಾರವಾದ ಚೈತನ್ಯ. ಹಿಂದಿನ ಕಾಲದಲ್ಲಿ ಹೆಣ್ಣುಮಕ್ಕಳ ಮದುವೆಯ ವಯಸ್ಸನ್ನು ಗಮನಿಸುವುದಾದರೆ, ಗಿರಿಜೆಯ ವಿವಾಹವಾದ ಸಂದರ್ಭ ಆಗಿನ ಕಾಲಕ್ಕೆ ತಡವಾದ ಮದುವೆಯೇ. ಅವರು ೧೯೩೨ ಮೇ ೩ನೇ ತಾರೀಖು ಹುಟ್ಟಿದರು. ಮದುವೆಯಾದದ್ದು ೧೯೫೮ರಲ್ಲಿ. ಬಿ.ಎ. ವ್ಯಾಸಂಗ ಮುಗಿದ ಮೇಲೆಯೇ ಮದುವೆಯಾಗಬೇಕೆಂದು ಗಿರಿಜಾ ನಿರ್ಧರಿಸಿದ್ದು ಇದಕ್ಕೆ ಕಾರಣ. ವಿದ್ಯಾವಂತ ಕುಟುಂಬವಾದುದರಿಂದ ಮನೆಯವರ ಅಭ್ಯಂತರವೂ ಇರಲಿಲ್ಲ.

ಗಿರಿಜೆಯ ಮದುವೆಯ ಕಥೆಯೂ ಒಂದು ರೋಚಕ ಪ್ರಸಂಗವೇ. ಶ್ರೀಕಂಠ ಪಂಡಿತರ ತಮ್ಮ ಶಂಕರ ಪಂಡಿತರೆಂಬುವರು ಮೈಸೂರಿನಲ್ಲಿದ್ದರು. ನರಹರಿ ಶಾಸ್ತ್ರಿಗಳ ಪ್ರಸಿದ್ಧಿಯನ್ನು ಅರಿತಿದ್ದ ಅವರಿಗೆ ತನ್ನ ಅಣ್ಣನ ಮಗಳು ಗಿರಿಜೆಯನ್ನು ಶಾಸ್ತ್ರಿಗಳ ಮೊಮ್ಮಗ ನಾರಾಯಣ ಶಾಸ್ತ್ರಿಗೆ ಮದುವೆಮಾಡಿಕೊಡಬಹುದೆಂದು ತೋರಿತು. ವಧುವನ್ನು ನೋಡುವುದಕ್ಕೆ ನಾರಾಯಣ ಶಾಸ್ತ್ರಿಯವರೊಡನೆ ಅವರ ತಾಯಿಯವರೂ ಇನ್ನು ಮೂರು ನಾಲ್ಕು ಜನ ಬಂಧುಗಳೂ ೧೯೫೮ ಜೂನ್ ೧ನೇ ತಾರೀಖು ಬೆಂಗಳೂರಿಗೆ ಹೋದರು. ನರಹರಿ ಶಾಸ್ತ್ರಿಯವರಿಗೆ ಅನಾರೋಗ್ಯವಾದುದರಿಂದ ಹೋಗಿರಲಿಲ್ಲ.

ಪಂಡಿತರ ಮನೆಗೆ ಹೋಗಿ ವಧುವನ್ನುನೋಡಿದ್ದಾಯಿತು. ಜೂನ್ ೨ನೇ ತಾರೀಖು ಮೈಸೂರಿಗೆ ವಾಪಸ್ ಬಂದ ಮನೆಯವರು ಹುಡುಗಿಯ ಜಾತಕವನ್ನು ನರಹರಿ ಶಾಸ್ತ್ರಿಗಳ ಕೈಯಲ್ಲಿಟ್ಟರು. ಗಿರಿಜೆಯ ಜಾತಕವನ್ನು ನೋಡಿದ ಶಾಸ್ತ್ರಿಗಳು 'ಹುಡುಗ ಹುಡುಗಿ ಜಾತಕ ಚೆನ್ನಾಗಿದೆ. ಜೂನ್ ೧೧ನೇ ತಾರೀಖು ಮದುವೆಯಾಗುತ್ತದೆ' ಎಂದು ಹೇಳಿದರು. ಇಷ್ಟೊಂದು 'ಅವಸರ'ದಲ್ಲಿ ತನ್ನ ಮದುವೆಯನ್ನು ನಿರ್ಧರಿಸಿದ ಅಪ್ಪನ ಮೇಲೆ ನಾರಾಯಣ ಶಾಸ್ತ್ರಿಯವರಿಗೆ ಕೋಪವೇ ಬಂದುಬಿಟ್ಟಿತು. 'ಎಲ್ಲರ ಜಾತಕವನ್ನು ನೀನು ನಿಧಾನವಾಗಿ ನೋಡುತ್ತೀ, ನನ್ನ ಜಾತಕವನ್ನು ನೋಡಿ ತಕ್ಷಣ ಹೀಗೆ ಹೇಳಿಬಿಟ್ಟೆಯಲ್ಲ 'ಎಂದು ಆಕ್ಷೇಪಿಸಿದ್ದೂ ಆಯಿತು.

ಮಾರನೆಯ ದಿನ ಜೂನ್ ೩ನೇ ತಾರೀಖು ಗಿರಿಜಾರವರ ಸೋದರ ಎಂ. ಎಸ್. ಗೋಪಾಲ್ ಮೈಸೂರಿಗೆ ಬಂದರು. ಸಂಬಂಧಕ್ಕೆ ಒಪ್ಪಿಗೆ ಕೊಟ್ಟ ನರಹರಿ ಶಾಸ್ತ್ರಿಗಳು, 'ಜೂನ್ ೧೧ ರಂದು ಮುಹೂರ್ತ ಇದೆ ಮದುವೆ ಮಾಡಿಬಿಡಿ 'ಅಂತ ಹೇಳಿದರು. ಗಿರಿಜೆಯ ಅಣ್ಣನಿಗೋ ಆಶ್ಚರ್ಯ! ಇಷ್ಟು ಬೇಗ ಮದುವೆ ಮಾಡುವುದಕ್ಕೆ ಆಗುತ್ತದೆಯೇ ಎಂದು ಯೋಚಿಸುತ್ತ ವಾಪಸ್ಸು ಬೆಂಗಳೂರಿಗೆ ಬಂದು ಹೇಳಿದರು. ನರಹರಿ ಶಾಸ್ತ್ರಿಗಳು ಹೇಳಿದಂತೆ ನಡೆಯದಿದ್ದರೆ ಹೇಗೆ? ಜೂನ್ ೧೧ನೇ ತಾರೀಖು ಶೇಷಾದ್ರಿಪುರಂನ ಎಂ. ಎಸ್. ಅಯ್ಯಂಗಾರ್ ಸ್ಟ್ರೀಟ್ ಮನೆಯಲ್ಲೇ ಗಿರಿಜೆಯೊಡನೆ ನಾರಾಯಣ ಶಾಸ್ತ್ರಿಯ ಮದುವೆ ನೆರವೇರಿತು. ಇಷ್ಟು ಕ್ಷಿಪ್ರವಾಗಿ ಮದುವೆ ನಡೆದದ್ದು ಎಲ್ಲರಿಗೂ ಆಶ್ಚರ್ಯ.

ಮನೆಯಲ್ಲಿ ಮಗ ನಾರಾಯಣ ಶಾಸ್ತ್ರಿಯ ಮದುವೆಯಿಂದ ಮೊದಲುಗೊಂಡು ಅನೇಕ ಶುಭಕಾರ್ಯಗಳು ನೆರವೇರಿದ್ದರೂ ನರಹರಿ ಶಾಸ್ತ್ರಿಗಳು ಅನಾರೋಗ್ಯದ ದೆಸೆಯಿಂದ ಹೋಗಲಾಗಿರಲಿಲ್ಲ. ಅವರ ಪರವಾಗಿ ಅವರ ಅಣ್ಣ ಶ್ರೀನಿವಾಸ ಶಾಸ್ತ್ರಿ ದಂಪತಿಯೇ ಹಸೆಮಣೆಯಲ್ಲಿ ಕುಳಿತುಕೊಳ್ಳುತ್ತಿದ್ದರು.

ಗಿರಿಜಾರವರ ಅಣ್ಣಂದಿರಲ್ಲಿ ಡಾ. ನೀಲಕಂಠರಾಯರು ಆಗ ಇಂಗ್ಲೆಂಡ್ ನಲ್ಲಿದ್ದರು. ಅವರನ್ನು ಹೊರತುಪಡಿಸಿ ಉಳಿದವರೆಲ್ಲ ವಿವಾಹ ಸಮಾರಂಭದಲ್ಲಿ ಭಾಗವಹಿಸಿದ್ದರು.

ಶಾಸ್ತ್ರಿಗಳ ಕುಟುಂಬ ವಾಸವಾಗಿದ್ದ ಮನೆಯ ಮಾಲೀಕರಾದ ಗೋಪಾಲರತ್ನಂ ಅವರಿಗಂತೂ ತುಂಬ ಸಂತೋಷ. ಆತ್ಮೀಯರಾದ ನರಹರಿ ಶಾಸ್ತ್ರಿಗಳ ಮಗನ ಮದುವೆ, ತಮಗೆ ಪರಿಚಿತರೇ ಆದ ಶ್ರೀಕಂಠ ಪಂಡಿತರ ಮಗಳು ಗಿರಿಜೆಯೊಡನೆ ನಡೆದದ್ದು ಅವರ ಸಂತಸವನ್ನು ಹೆಚ್ಚಿಸಿತ್ತು. ನವದಂಪತಿಯ ವಾಸ್ತವ್ಯಕ್ಕಾಗಿ ಗೋಪಾಲ ರತ್ನಂ ಅವರು ತಮ್ಮ ಮನೆಯ ಮಹಡಿ ಮೇಲೆ ಒಂದು ಕೊಠಡಿಯನ್ನು ಬಿಟ್ಟು ಕೊಟ್ಟರು.

**********

ಗಿರಿಜೆಯ ಮನೆತನ ಶ್ರೀಮಂತ ಕುಟುಂಬವಾದರೆ ಶಾಸ್ತ್ರಿಗಳ ಸಂಸಾರ ಕೆಳ ಮಧ್ಯಮವರ್ಗದ ಕುಟುಂಬ ಎನ್ನಬಹುದಾದದ್ದು. ನಾರಾಯಣ ಶಾಸ್ತ್ರಿಯವರಂತೂ ಆರ್ಥಿಕವಾಗಿ ಒಂದೊಂದೇ ಮೆಟ್ಟಲೇರಿ ಬದುಕು ನಡೆಸಿದವರು. ಇಷ್ಟಾಗಿ ಗಿರಿಜಾರವರಿಗೆ ಪತಿಯ ಮನೆಯ ಸ್ಥಿತಿಗತಿಗಳೊಡನೆ ಹೊಂದಿಕೊಂಡು ಬಾಳುವುದಕ್ಕೇನೂ ಕಷ್ಟವೆನಿಸಲಿಲ್ಲ.
ಅವರು ಯಾವ ಕುಂದುಕೊರತೆಯನ್ನಾಗಲಿ, ಇಲ್ಲಸಲ್ಲದ ದೊಡ್ಡಸ್ತಿಕೆಯನ್ನಾಗಲಿ ಹೇಳಿಕೊಳ್ಳುವವರಾಗಿರಲಿಲ್ಲ. ರೈಲ್ವೆ ಇಲಾಖೆಯಲ್ಲಿ ಸಾಧಾರಣ ಗುಮಾಸ್ತರಾಗಿದ್ದ ನಾರಾಯಣ ಶಾಸ್ತ್ರಿಗೆ ಮದುವೆಯಾಗುವ ಕಾಲಕ್ಕೆ ಸಂಬಳ ಕೇವಲ ೧೧೨ ರೂಪಾಯಿ. ಅದಷ್ಟೇ ಹಣವನ್ನು ಗಿರಿಜಾ ನೀಟಾಗಿ ಲೆಕ್ಕ ಬರೆದಿಡುತ್ತಿದ್ದರು. ತೆಂಗಿನ ಕಾಯಿಗೆ ಎಷ್ಟು ಬೆಲೆ, ಅಕ್ಕಿ ಎಷ್ಟು ಬೆಲೆಗೆ ತಂದಿದ್ದು ಹೀಗೆ ಬರೆದಿಡುತ್ತಿದ್ದರು .

ಪುಟ 4 ರಲ್ಲಿ ಮುಂದುವರೆದಿದೆ



ಪುಟ 3 ರಿಂದ

ಶಾಸ್ತ್ರಿ ಒಂದು ಶಾಂತ ಸಾಗರವಾದರೆ ಗಿರಿಜಾ ಜಲಪಾತ ಇದ್ದ ಹಾಗೆಯೇ. ಬಹು ಚೈತನ್ಯಶೀಲ ವ್ಯಕ್ತಿತ್ವದ ತರುಣಿ, ಸಾಹಸಶೀಲೆ, ಮಾತುಗಾರ್ತಿ. ತವರು ಮನೆಯಲ್ಲಿ ತಂದೆತಾಯಿಯರೊಡನೆ ಒಡಹುಟ್ಟಿದವರು ಐದಾರು ಜನವಿದ್ದ ಕುಟುಂಬವಾದರೆ ಇಲ್ಲಿ ನಾರಾಯಣ ಶಾಸ್ತ್ರಿಗಳ ಮನೆಯಲ್ಲಿ ಅವಿಭಕ್ತ ಕುಟುಂಬ. ಇಪ್ಪತ್ತು-ಮೂವತ್ತು ಜನವಿದ್ದ ದೊಡ್ಡ ಸಂಸಾರ. ಪ್ರಾರಂಭದಲ್ಲಿ ಎಲ್ಲರ ಹೆಸರು ಗುರುತಿಸಿ ನೆನಪಿಟ್ಟುಕೊಳ್ಳುವುದೇ ಒಂದು ಕೆಲಸ ಎನ್ನಿಸಿದ್ದೂ ಉಂಟು.

ತಮ್ಮ ೫೨ನೇ ವಯಸ್ಸಿಗೆಲ್ಲ ರೈಲ್ವೇ ಇಲಾಖೆಯ ಉದ್ಯೋಗದಿಂದ 'ನಿವೃತ್ತಿ' ಯನ್ನು ಪಡೆದಿದ್ದ ನರಹರಿ ಶಾಸ್ತ್ರಿಯವರು ತೀವ್ರವಾದ ಮಧುಮೇಹ, ಕ್ಷಯದಂತಹ ಬೇನೆಗಳಿಗೆ ತುತ್ತಾಗಿದ್ದುದರಿಂದ ಅವರು ಮನೆಬಿಟ್ಟು ಹೋಗುತ್ತ ಇರಲಿಲ್ಲ. ಜನರಂತೂ ಮನೆಗೇ ಬರುತ್ತಿದ್ದರು; ಶಾಸ್ತ್ರಿಗಳಿಂದ ಜ್ಯೋತಿಷ್ಯ ಪರಿಹಾರ ಕೇಳುತ್ತಿದ್ದರು. ಜನರು ದುಡ್ಡು ಕೊಡಲು ಮುಂದಾದರೆ ಶಾಸ್ತ್ರಿಯವರು ಅದನ್ನು ಕೈಯಿಂದ ಮುಟ್ಟುತ್ತ ಇರಲಿಲ್ಲ. ದುಡ್ಡು ತೆಗೆದುಕೊಂಡು ಜ್ಯೋತಿಷ್ಯ ಹೇಳಬಾರದು ಅನ್ನೋದು ಅವರ ಉದ್ದೇಶ. ಹಾಗಾಗಿ ಅದನ್ನು ಮುಟ್ಟುತ್ತಿರಲಿಲ್ಲ. ಬಂದವರು ಹಾಗೆಯೇ ಹೋಗಲಾರದೆ, ಶಾಸ್ತ್ರಿಗಳ ಪಕ್ಕದಲ್ಲಿದ್ದ ದಿಂಬಿನ ಕೆಳಗೆ ಒಂದಿಷ್ಟು ಹಣ ಇರಿಸಿ ಹೋಗುತ್ತಿದ್ದರು.

ತಮ್ಮ ಪತಿ ಹಣವನ್ನು ಮುಟ್ಟುತ್ತಿರಲಿಲ್ಲವೆಂದು ಅಕ್ಕಯ್ಯಮ್ಮನವರೂ ಆ ಹಣವನ್ನು ಮುಟ್ಟುತ್ತಿರಲಿಲ್ಲ. ಈಗ ಕುಟುಂಬದ ಹಿರಿ ಸೊಸೆಯಾಗಿ ಗಿರಿಜಾ ಮನೆಗೆ ಬಂದಾಗ, ಶಾಸ್ತ್ರಿಗಳು "ಗಿರಿಜಮ್ಮ ಬಾ ಇಲ್ಲಿ" ಎಂದು ಆಕೆಯನ್ನು ಕರೆದು, "ಇಲ್ಲಿ ನನ್ನ ದಿಂಬಿನ ಕೆಳಗೆ ದುಡ್ಡು ಇರುತ್ತೆ. ನೀನೇ ಹಿರಿಯ ಸೊಸೆ. ಹಣವನ್ನು ತೆಗೆದುಕೊಳ್ಳುವ, ಮನೆ ನಡೆಸುವ ಜವಾಬ್ದಾರಿ ನಿನ್ನದೇ" ಎಂದು ಹೇಳಿ ಹೊಣೆ ವಹಿಸಿಕೊಟ್ಟರು.

ಮೈಸೂರಿನಲ್ಲಿ ಇದ್ದ ಸುಮಾರು ಮೂರು ವರ್ಷಗಳ ಅವಧಿಯಲ್ಲಿ ಗಿರಿಜಾ ಮನೆಯ ದಿನನಿತ್ಯದ ನಿರ್ವಹಣೆ ವಹಿಸಿಕೊಂಡು ನಡೆಸುತ್ತ ಇದ್ದರು. ಆಗಾಗ ದುಡ್ಡಿಗೆ ಏನಾದರೂ ಕೊರತೆಯಾದರೆ ನರಹರಿ ಶಾಸ್ತ್ರಿಗಳೇ ಸಮಾಧಾನ ಮಾಡುತ್ತ ಇದ್ದರು. ಏನೂ ಯೋಚನೆ ಮಾಡಬೇಡ ಯಾರಾದರೂ ಬರುತ್ತಾರೆ ಎನ್ನುತ್ತಿದ್ದರು. ಹಾಗೆಂದು ಸುಮ್ಮನೆ ಕುಳಿತಿರುವುದಕ್ಕೆ ಆದೀತೇ? ೩೦ ಜನಕ್ಕೆ ಅಡುಗೆ ಮಾಡಿ ಹಾಕಬೇಕು ಎಂದು ಚಿಂತಿಸುತ್ತಿದ್ದರೆ, ಅರ್ಧಗಂಟೆಯಲ್ಲಿ ಯಾರೋ ಒಬ್ಬರು ಬಂದು ತರಕಾರಿ ತಂದಿಡುವರು, ಇನ್ಯಾರೋ ಬಂದು ಅಕ್ಕಿಕೊಟ್ಟು ಹೋಗುವವರು. ದೊಡ್ಡ ಕುಟುಂಬ, ಮಕ್ಕಳೊಂದಿಗರು ಅಂತ ಹೇಳಿ ಕೊಟ್ಟು ಕಳುಹಿಸುವವರು ಕೆಲವರು. ಗೋಪಾಲ ರತ್ನಂ ಅವರೂ ಶಾಸ್ತ್ರಿಗಳ ಮನೆಯಲ್ಲಿ ತೊಂದರೆ ಇದೆ ಕೊಟ್ಟು ಬಿಡಿ ಎಂದು ಹೇಳಿ ಏನಾದರೂ ಕೊಟ್ಟು ಕಳುಹಿಸುವುದಿತ್ತು. ಹೀಗೆಯೇ ಆತಂಕ ಕಳೆದುಹೋಗುತ್ತಿತ್ತು.

ನಾರಾಯಣ ಶಾಸ್ತ್ರಿ ನೋಡಲು ಎತ್ತರವಾಗಿಯೂ ದೃಢವಾಗಿಯೂ ಇದ್ದವರು. ವಿರುದ್ಧವಾಗಿ ಗಿರಿಜಾ ತೆಳ್ಳಗೆ, ಕುಳ್ಳಗೆ ಇದ್ದವರು. ಶಾಸ್ತ್ರಿಯವರ ಮೈಬಣ್ಣ ಕಪ್ಪಗೆ; ಗಿರಿಜಾ ಬೆಳ್ಳಗಿದ್ದರು. ಗಂಡ ಎಷ್ಟು ಮೌನಿಯೋ ನಿಧಾನಸ್ಥನೋ ಹೆಂಡತಿ ಅಷ್ಟೇ ಮಾತುಗಾರ್ತಿ, ಚುರುಕುಸ್ವಭಾವದವಳು. ಹೀಗೆ, ನಾರಾಯಣ ಶಾಸ್ತ್ರಿ-ಗಿರಿಜೆಯರ ಸ್ವರೂಪ ಸ್ವಭಾವಗಳಲ್ಲಿ ವೈರುಧ್ಯವಿದ್ದರೂ ಅವರಲ್ಲಿ ಬಹಳ ಅನ್ಯೋನ್ಯ ಮತ್ತು ಹೊಂದಾಣಿಕೆ ಇತ್ತು. ಹೊಂದಾಣಿಕೆ ಎಂತಹುದೆಂದರೆ, ಶಾಸ್ತ್ರಿಗಳು ಏನು ಹೇಳಬೇಕೆಂದಿದ್ದರೆನ್ನುವುದು ಹೇಳದೆಯೇ ಗಿರಿಜೆಗೆ ಅರ್ಥವಾಗುತ್ತಿತ್ತು. ಗಿರಿಜಾ ಏನನ್ನು ಇಷ್ಟಪಡುತ್ತಾರೆ ಎನ್ನುವುದು ಶಾಸ್ತ್ರಿಗಳಿಗೆ ಇಂಗಿತದಿಂದಲೇ ಅರ್ಥವಾಗುತ್ತಿತ್ತು. ಈ ಬಗೆಯ ಹೊಂದಾಣಿಕೆ ಇದ್ದುದರಿಂದ ಅವರ ದಾಂಪತ್ಯ ಸುಖಮಯವಾಗಿ ಸಾಗಿತು.

ನರಹರಿ ಶಾಸ್ತ್ರಿಗಳ ಯಾಜಮಾನ್ಯದ ಅವಿಭಕ್ತ ಕುಟುಂಬ ಕಳೆದ ನಲವತ್ತಕ್ಕೂ ಹೆಚ್ಚು ವರ್ಷಗಳ ಕಾಲ ಏಳುಬೀಳುಗಳನ್ನು ಲೆಕ್ಕಿಸದೆ ಸಹಜೀವನದಲ್ಲಿ ನೆಮ್ಮದಿಯನ್ನು ಕಂಡುಕೊಂಡಿದ್ದುದೇನೋ ನಿಜ. ಆದರೆ, ಅದರ ವ್ಯವಸ್ಥೆಯಲ್ಲಿ, ನಿರ್ವಹಣೆಯಲ್ಲಿ ಕೊರತೆಗಳು ಇದ್ದುದೂ ಸಹಜವೇ. ಸೂಕ್ಷ್ಮಮತಿಯಾದ ಗಿರಿಜಾ ಶಾಸ್ತ್ರಿ ಅಂಥ ಕುಂದುಗಳನ್ನು ಸರಿಪಡಿಸಲು ಸನ್ನದ್ಧರಾದರು. ಎಲ್ಲಕ್ಕಿಂತ ಮೊದಲು ಅವರಿಗೆ ಗೋಚರಿಸಿದ್ದು ಅತ್ತೆ ಅಕ್ಕಯ್ಯಮ್ಮನವರ ಅಸಹಾಯಕತೆಯೇ. ಚಿಕ್ಕ ಅಡುಗೆಮನೆಯ ಹೊಟ್ಟಿನ ಒಲೆಯೆದುರು ಕುಳಿತು ಮೂವತ್ತು ಜನರಿಗೆ ಅಡುಗೆ ಬೇಯಿಸಿ ಹಾಕುವ ನಿರಂತರ ದುಡಿಮೆಯಿಂದ ಅವರಿಗೆ ಕಿಂಚಿತ್ತೂ ವಿರಾಮವೇ ಇರಲಿಲ್ಲ. ಬೆಳಗಿನಿಂದ ಸಂಜೆಯವರೆಗೂ ಒಬ್ಬರಲ್ಲ ಒಬ್ಬರು ಬಂದು ಕುಳಿತು ಊಟ ಮಾಡುವುದು ನಡೆದೇ ಇತ್ತು.

ನರಹರಿ ಶಾಸ್ತ್ರಿಗಳು ತಮ್ಮ ಕೊಠಡಿಯಿಂದ ಎದ್ದು ಬರುತ್ತಿರಲಿಲ್ಲ. ಅವರ ಊಟವಾಗುವವರೆಗೂ ಅಕ್ಕಯ್ಯಮ್ಮನಿಗೆ ಊಟವಿಲ್ಲ. ಅವರನ್ನು ಕರೆಯಲು ಅಡುಗೆಮನೆಯಿಂದ ಎದ್ದು ಬರುವಂತೆಯೂ ಇಲ್ಲದ ಸ್ಥಿತಿ. ಅಡುಗೆಮನೆಯ ವಸ್ತುಗಳನ್ನು ತಕ್ಕಮಟ್ಟಿಗೆ ಓರಣವಾಗಿಸುವುದರಿಂದ ಮೊದಲುಗೊಂಡು ಮನೆಯ ಸದಸ್ಯರಿಗೆ ಊಟಕ್ಕೆ ಸಮಯ ನಿಗದಿಪಡಿಸುವ ನಿಯಮದವರೆಗೆ ಗಿರಿಜಾ ಹಲವು ರೂಢಿಗಳನ್ನು ಜಾರಿಗೊಳಿಸಿದರು. ದೇಹವೈಕಲ್ಯವಿದ್ದ ಬಂಧು ಸೂರ್ಯನಾರಾಯಣನ ನೆರವಿಗೆ ನಿಂತು ಆತನಿಗೆ ಅನುಕೂಲವಾಗುವ ಹಾಗೆ ವ್ಯವಸ್ಥೆಯನ್ನು ಕಲ್ಪಿಸಿಕೊಟ್ಟರು. ಮಾವ ನರಹರಿ ಶಾಸ್ತ್ರಿಗಳ ಪೂಜಾಕಾರ್ಯಕ್ಕೆ ಬೇಕಾದ ಸಿದ್ಧತೆಗಳನ್ನು ನೇರ್ಪಡಿಸಿಕೊಡುತ್ತಿದ್ದರು. ಮನೆಯ ಎಲ್ಲ ಸದಸ್ಯರೂ ಗಿರಿಜಾರವರ ಸೂಚನೆಗಳನ್ನು ಅಭಿಮಾನದಿಂದಲೇ ಒಪ್ಪಿಕೊಂಡು ಮನೆವಾರ್ತೆ ಸುಸೂತ್ರವಾಗಿ ನಡೆಯಲು ಸಹಕರಿಸತೊಡಗಿದರು.

ಗಿರಿಜಾ ತನ್ನ ಪತಿಯ ಮನೆಯ ಬಂಧುವರ್ಗದವರನ್ನೆಲ್ಲ ತುಂಬ ವಿಶ್ವಾಸದಿಂದ ನೋಡುತ್ತಿದ್ದರು. ಹೀಗಾಗಿ ಗಿರಿಜಾ ಶಾಸ್ತ್ರಿ ಕುಟುಂಬದ ಅಚ್ಚುಮೆಚ್ಚಿನ ಸೊಸೆಯೆನಿಸಿದ್ದರು. ತನ್ನ ಮೈದುನ ಕೃಷ್ಣಮೂರ್ತಿ, ನಾದಿನಿ ನಾಗರತ್ನ, ಶಾಸ್ತ್ರಿಯವರ ಸೋದರಬಂಧುಗಳಾದ ಸುಂದರಮೂರ್ತಿ, ರಾಮಮೂರ್ತಿ ಇವರೆಲ್ಲರ ಮದುವೆಗಳನ್ನು ಗಿರಿಜಾ ಶಾಸ್ತ್ರಿಯವರೇ ಮುಂದೆ ನಿಂತು ಮಾಡಿಸಿದರು. ನಾರಾಯಣ ಶಾಸ್ತ್ರಿಯ ಬಂಧುಗಳಲ್ಲಿ ವಿವಾಹದ ನಿರೀಕ್ಷೆಯಲ್ಲಿದ್ದ ಯುವಕರಿಗೆ ತನ್ನ ತವರಿನ ಸಂಬಂಧದ ಕನ್ಯೆಯರನ್ನು ಮದುವೆಮಾಡಿಸಿ ಎರಡೂ ಕುಟುಂಬಗಳ ಬಾಂಧವ್ಯವನ್ನು ಗಟ್ಟಿಗೊಳಿಸಿದರು.

ನಾರಾಯಣ ಶಾಸ್ತ್ರಿಯ ವಿವಾಹವಾದ ಮುಂದಿನ ಒಂದೆರಡು ವರುಷಗಳಲ್ಲಿ ಕುಟುಂಬದಲ್ಲಿ ಅನೇಕ ಶುಭ ಕಾರ್ಯಗಳು ಘಟಿಸಿದವು. ೧೯೫೯ ಸೆಪ್ಟೆಂಬರ್ ೨೨ ರಂದು ಗಿರಿಜಾ ಗಂಡುಮಗುವಿಗೆ ಜನ್ಮವಿತ್ತು ಕುಟುಂಬದ ಸಂಭ್ರಮವನ್ನು ಮಿಗಿಲುಗೊಳಿಸಿದರು. ಮಗು ಹುಟ್ಟಿದ ಕೆಲವು ದಿನಗಳ ನಂತರ, ಮನೆಮಂದಿ ಊಟಕ್ಕೆ ಕುಳಿತಿದ್ದಾಗ ನರಹರಿ ಶಾಸ್ತ್ರಿಗಳು " ಪುರೋಹಿತರ ವಂಶದಲ್ಲಿ ಪ್ರಚಂಡ ಹುಟ್ಟಿದ್ದಾನೆ, ಮಗುವಿಗೆ ಚಕ್ರವರ್ತಿ ಯೋಗ ಇದೆಯಪ್ಪ!" ಎಂದು ಉದ್ಗರಿಸಿದಾಗ ಮನೆಯವರ ಸಂತಸಕ್ಕೆ ಪಾರವೇ ಇಲ್ಲ!

ಚಕ್ರವರ್ತಿ ಯೋಗದ ಈ ಶಿಶುವಿಗೆ ತಾಯ್ತಂದೆಯರು ಇಟ್ಟ ಹೆಸರು - ಅನಂತಕುಮಾರ!

೧೯೫೯ ರಲ್ಲಿ ಅನಂತಕುಮಾರ್ ಜನನವಾದ ಮೇಲೆಯೇ ಗಿರಿಜಾ ಶಾಸ್ತ್ರಿಯವರು ಹುಬ್ಬಳ್ಳಿಗೆ ಬಂದದ್ದು. ಹುಬ್ಬಳ್ಳಿಗೆ ಪತ್ನೀಸಮೇತರಾಗಿ ಹೋಗುವ ಮುನ್ನ ನಾರಾಯಣ ಶಾಸ್ತ್ರಿಗಳು ತಮ್ಮ ತಂದೆಯವರೊಡನೆ ಮಾತನಾಡುತ್ತ, ನಾನು ಮೈಸೂರಿಗೋ ಬೆಂಗಳೂರಿಗೋ ವರ್ಗ ಮಾಡಿಸಿಕೊಂಡು ಸಂಸಾರದೊಡನೆ ಇಲ್ಲಿಗೇ ಬಂದುಬಿಡುತ್ತೇನೆ ಎಂದು ಹೇಳಿದರಂತೆ. ಆಗಿನ ಕಾಲಕ್ಕೆ ಮೈಸೂರು ಬೆಂಗಳೂರುಗಳಿಗೆ ಹುಬ್ಬಳ್ಳಿಯ ಭಾಗ ಎಲ್ಲೋ ದೂರದ್ದು, ಗೊತ್ತಿಲ್ಲದ ಊರು ಎಂಬ ಭಾವನೆ ಇತ್ತು. ಆದರೆ, ನರಹರಿ ಶಾಸ್ತ್ರಿಗಳು ಹೇಳಿದರು: "ಇಲ್ಲಿಗೆ ಬರುವುದೇಕೆ? ನಿಮ್ಮ ಮಗನಿಗೆ ಭವಿಷ್ಯ ಇರುವುದೇ ಹುಬ್ಬಳ್ಳಿಯಲ್ಲಿ!"

# ಶ್ರದ್ಧೆ ಭಕ್ತಿ ಶಕ್ತಿಗಳನ್ನು ಬೆಳೆಸುವ ಅದಮ್ಯ ಚೇತನ

**ಅನನ್ಯಾಶ್ಚಿಂತಯಂತೋ ಮಾಂ ಯೇ ಜನಾಃ ಪರ್ಯುಪಾಸತೇ |**
**ತೇಷಾಂ ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಮ್ ||**



**ಡಾ. ಪುರುಷೋತ್ತಮ್ ರಾಜಿಮ್‌ವಾಲೆ**
ಅಧ್ಯಕ್ಷರು. ವಿಶ್ವ ಫೌಂಡೇಶನ್, ಅಕ್ಕಲಕೋಟೆ

ಗತಿಸಿದ ವರ್ಷವನ್ನು ಬೀಳ್ಕೊಡುತ್ತ ಹೊಸವರ್ಷವನ್ನು ಸ್ವಾಗತಿಸುವ ಅನಂತ ಸೇವಾ ಉತ್ಸವವು ಒಂದು ಅತ್ಯಪೂರ್ವ ಪರಿಕಲ್ಪನೆ. ಡಿಸೆಂಬರ್ ೩೧ರಂದು ನಾವು ಅಗ್ನಿಹೋತ್ರ ಕಾರ್ಯಕ್ರಮ ನಡೆಸಿದ್ದೆವು; ಅದರಲ್ಲಿ ಸುಮಾರು ೫೦೦-೬೦೦ ಜನರು ಉತ್ಸಾಹದಿಂದ ಭಾಗವಹಿಸಿದ್ದರು. ವರ್ಷದ ಕೊನೆಯ ದಿನದ ವೈಭವಕ್ಕೆ ಸರಿಸಾಟಿಯಾಗಿ ಹೊಸ ವರ್ಷದ ಸ್ವಾಗತವೂ ಜನವರಿ ಒಂದರಂದು ಸಂಭ್ರಮದಿಂದ ನಡೆಯುತ್ತಿದೆ.

ಅದಮ್ಯ ಚೇತನವು ಒಂದು ಅದ್ಭುತ ಸಂಸ್ಥೆ. ಅದು ಆಚರಿಸುವ ಅನಂತ ಸೇವಾ ಉತ್ಸವವೂ ಅಭೂತಪೂರ್ವ. ಎರಡು ದಿನಗಳ ಕಾಲ ನಡೆಯುವ ಕಾರ್ಯಕ್ರಮಗಳು ಒಂದಕ್ಕಿಂತ ಒಂದು ಉತ್ತಮ ಎಂಬಂತಿವೆ. ಉತ್ಸವದ ಅಂಗವಾಗಿ ಪ್ರಾಚೀನ ದೇವಾಲಯಗಳ ಛಾಯಾಚಿತ್ರಗಳ ಪ್ರದರ್ಶಿನಿಯಲ್ಲಿ ೭೫ ದೇವಾಲಯಗಳ ಛಾಯಾಚಿತ್ರವನ್ನು ನೋಡಿ ಬೆರಗಾಗುತ್ತೇವೆ. ಶ್ರೀ ಕೆಂಗೇರಿ ಚಕ್ರಪಾಣಿಯವರು ಕರ್ನಾಟಕದ ವಿವಿಧ ಭಾಗಗಳ ದೇವಾಲಯಗಳ ೨೦೦೦ಕ್ಕೂ ಹೆಚ್ಚು ಛಾಯಾಚಿತ್ರಗಳನ್ನು ತೆಗೆದು ಪ್ರದರ್ಶನ ಮಾಡುತ್ತಿದ್ದಾರೆ ಎಂದು ತಿಳಿಯಿತು. ಈ ಪ್ರದರ್ಶಿನಿಯಲ್ಲಿ ಕರ್ನಾಟಕದ ಕಲೆ, ಸಂಸ್ಕೃತಿ ಮತ್ತು ವಾಸ್ತುಶಿಲ್ಪಗಳ ವೈಭವದ ಪರಿಚಯ ದೊರೆಯುತ್ತದೆ. ಇಂತಹ ವೈಭವವನ್ನು ಸೃಷ್ಟಿಸಿದ ನಾಗರಿಕತೆಯು ಅದೆಷ್ಟು ಮಹಾನ್ ಇರಬೇಕು ಎಂದು ನಮಗೆ ಅಚ್ಚರಿಯಾಗುತ್ತದೆ. ಏಳೆಂಟು ಶತಮಾನಗಳ ಹಿಂದೆ ಇಂತಹ ಬೃಹತ್ ನಿರ್ಮಾಣಗಳನ್ನು ಮಾಡಲು ಅವರಿಗೆ ಯಾವ ಮಟ್ಟದ ದೂರದೃಷ್ಟಿ, ಪರಿಣತಿ, ಜ್ಞಾನ, ಸಂಪತ್ತು ಇದ್ದಿರಬೇಕು! ಕಾಲಕ್ರಮದಲ್ಲಿ ಇಂತಹ ಸಂಸ್ಕೃತಿ, ಜ್ಞಾನ ಹೇಗೆ ನಷ್ಟವಾಯಿತು ಎಂದೂ ನಮಗೆ ತಿಳಿದಿಲ್ಲ.

ಇಂದಿನ ಭಾರತವು ಅಂತಹ ವೈಭವದ ದಿನಗಳನ್ನು ಮತ್ತೆ ಗಳಿಸುವ ದಿನಗಳು ದೂರವಿಲ್ಲ. ವಿಶ್ವ ವಿಕ್ರಮದ ಜಾಗತಿಕ ಆಶೋತ್ತರಗಳನ್ನು ಇಂದಿನ ಯುವ ಪೀಳಿಗೆ ಹೊಂದಿದೆ. ಇಂದಿನ ಭಾರತದ ಚೈತನ್ಯವನ್ನು ಯಾರಿಂದಲೂ ಮಣಿಸಲು ಸಾಧ್ಯವಿಲ್ಲ. ಭಾರತದ ಸಂಸ್ಕೃತಿಯನ್ನು ಎಷ್ಟೇ ತುಳಿಯಲು ಪ್ರಯತ್ನಿಸಿದರೂ ಅಷ್ಟೇ ಪರಿಣಾಮಕಾರಿಯಾಗಿ ಅದು ಪದೇ ಪದೇ ಪುಟಿದೇಳುತ್ತದೆ. ಅದಮ್ಯ ಚೇತನಗಳನ್ನು ಸೃಷ್ಟಿಸಲು ಇಂತಹ ಸೇವಾ ಉತ್ಸವಗಳು ಸಹಕಾರಿಯಾಗಿವೆ.

ನಮ್ಮ ಚೇತನದ ಅದಮ್ಯ ಶಕ್ತಿಗೆ ನಮ್ಮ ಶ್ರದ್ಧೆಯೇ ಕಾರಣ. ಈ ಶ್ರದ್ಧೆಯನ್ನು ನಮಗೆ ಸನಾತನ ಧರ್ಮ ನೀಡುತ್ತದೆ. ಸತ್ಯದ ಮೇಲಿರುವ ವಿಶ್ವಾಸವನ್ನು ಶ್ರದ್ಧೆ ಎಂದು ಹೇಳುತ್ತೇವೆ. ನಿಮ್ಮ ಸತ್ಯದ ಮೇಲೆ, ನಿಮ್ಮ ಚಾರಿತ್ರ್ಯದಲ್ಲಿ, ನಿಮ್ಮ ನಿಷ್ಠೆಯ ಮೇಲೆ ನಿಮಗಿರುವ ವಿಶ್ವಾಸವೇ ಶ್ರದ್ಧೆ. ಶ್ರದ್ಧೆಯಿದ್ದರೆ ನಾಗರಿಕತೆಯ ಪುನರ್ನಿರ್ಮಾಣ ಮಾಡಬಹುದು, ಬೃಹತ್ ನಿರ್ಮಾಣಗಳನ್ನು ಮಾಡಬಹುದು. ನಮ್ಮಲ್ಲಿ ಅಚಲವಾದ ಶ್ರದ್ಧೆಯಿರುವಾಗ ಯಾವ ಶಕ್ತಿಯೂ ನಮಗೆ ಹಾನಿ ಮಾಡಲು ಶಕ್ತವಾಗುವುದಿಲ್ಲ. ನಮ್ಮ ಪವಿತ್ರ ಭರತಭೂಮಿಯಲ್ಲಿ ಇಡೀ ನಾಗರಿಕತೆಗೆ, ಅಷ್ಟೇಕೆ, ಇಡೀ ವಿಶ್ವಕ್ಕೆ ಮಾರ್ಗದರ್ಶನ ಮಾಡಬಲ್ಲ ಮಹಾಪುರುಷರು ಕಾಲದಿಂದ ಕಾಲಕ್ಕೆ ಅವತರಿಸಿ ಹೊಸ ಭರವಸೆಗಳನ್ನು ಹುಟ್ಟಿಸಿದ್ದಾರೆ. ಕಳೆದ ವರ್ಷ ಜಗತ್ತು ಕೊರೋನಾ ಪಿಡುಗು, ಅಪರಾಧಗಳು, ವ್ಯಸನಗಳು, ಯುದ್ಧಗಳ ಮೂಲಕ ಸಾಗುತ್ತಿದ್ದಾಗ ನಾವು ಸೇವೆ, ಭಕ್ತಿ, ಉನ್ನಯನ, ಉತ್ಕರ್ಷಗಳ ಕುರಿತು ಮಾತನಾಡುತ್ತಿದ್ದೆವು.

ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಜೊತೆ ಮಾತನಾಡುವಾಗ ಅವರು ಪ್ರತಿದಿನ ಎರಡು ಲಕ್ಷ ಮಕ್ಕಳಿಗೆ ಮಧ್ಯಾಹ್ನದ ಬಿಸಿಯೂಟ ಒದಗಿಸುತ್ತಿರುವ ವಿಷಯವನ್ನು ಅದೊಂದು ಸಾಮಾನ್ಯ ಸಂಗತಿಯೆಂಬಂತೆ ತಿಳಿಸಿದರು. ಅದು ಅವರ ಸರಳತೆ ಮತ್ತು ವಿನಯಶೀಲತೆಯನ್ನು ಪ್ರತಿಬಿಂಬಿಸುತ್ತದೆ. ಹಲವು ಅವತಾರಗಳ ಆಶೀರ್ವಾದವನ್ನು ಹೊಂದಿರುವ, ಯೋಗ, ಅಗ್ನಿಹೋತ್ರ, ಆಯುರ್ವೇದಗಳ ಈ ಪವಿತ್ರ ಭೂಮಿಯಲ್ಲಿ ಮಾತ್ರ ಇದೆಲ್ಲ ಸಂಭವಿಸುವುದು ಸಾಧ್ಯ. ಭಾರತವು ಜಗತ್ತಿಗೆ ಪದೇ ಪದೇ ಆಶಾಕಿರಣಗಳನ್ನು ನೀಡಿದೆ. ಭಾರತವು ವಿಜ್ಞಾನದ ಕೇತ್ರ, ಭಕ್ತಿಯ ಕ್ಷೇತ್ರ. ಇಲ್ಲಿ ಒಂದು ಹುಲ್ಲಿನೆಳೆಯನ್ನು ಅಥವಾ ಒಂದು ಸಣ್ಣ ಬೀಜವನ್ನು ನೆಟ್ಟರೂ ಅದು ಪವಿತ್ರವಾದ ವಟವೃಕ್ಷವಾಗಿ ಬೆಳೆಯಬಲ್ಲುದು, ಅಷ್ಟು ಪರಿಶುದ್ಧ ಮತ್ತು ಫಲವತ್ತು, ಈ ನೆಲದ ಮಣ್ಣು. ಇಡೀ ಜಗತ್ತು ಪರಮಾಣು ಯುದ್ಧದ ಬಗ್ಗೆ ಮಾತನಾಡುತ್ತಿದ್ದರೆ, ನಮ್ಮ ದೇಶವು ಸೇವೆ ಮತ್ತು ಭಕ್ತಿಗಳ ಬಗ್ಗೆ ಮಾತನಾಡುತ್ತಿದೆ. ನಮ್ಮ ಋಷಿ ಮುನಿಗಳ ದರ್ಶನವು ಅನಂತಕುಮಾರ್ ದಂಪತಿಗಳ ಮೂಲಕ ಪ್ರಕಟವಾಗುತ್ತಿದೆ. ಶ್ರೀಮತಿ ತೇಜಸ್ವಿನಿಯವರು ಮುಂದಿನ ಪೀಳಿಗೆಗೆ ಶಕ್ತಿಯನ್ನು ನೀಡುವ ಆಧಾರ ಸ್ತಂಭದಂತಿದ್ದಾರೆ. ಸೇವೆ ಮತ್ತು ಶ್ರದ್ಧೆಗಳ ಪ್ರತಿಮೂರ್ತಿಯಾಗಿದ್ದ ಅನಂತಕುಮಾರರು ಸ್ಥಾಪಿಸಿದ ಈ ಅದಮ್ಯಚೇತನ ಸಂಸ್ಥೆಯು ಎರಡು ಲಕ್ಷ ಜನರ ಹಸಿವನ್ನು ತಣಿಸುತ್ತಿದೆಯೆಂದರೆ ಅದಕ್ಕಿಂತ ಪುಣ್ಯದ ಕೆಲಸ ಬೇರೊಂದಿಲ್ಲ. ಇಂತಹ ಪುಣ್ಯಕಾರ್ಯ ನಡೆಯುತ್ತಿರುವ ಈ ಸ್ಥಳಕ್ಕೆ ಹೊಸವರ್ಷದ ದಿನದಂದು ಭೇಟಿ ನೀಡುವುದು ನಮ್ಮ ಭಾಗ್ಯ. ಇಂದು ಅಕ್ಕಲಕೋಟೆ ಮಹಾರಾಜರ ಪಾದುಕೆ ಇಲ್ಲಿಗೆ ಆಗಮಿಸಿದೆಯೆಂದರೆ ಅದು ಕೇವಲ ಕಾಕತಾಳೀಯವಲ್ಲ. ಇಲ್ಲಿನ ಪುಣ್ಯಕಾರ್ಯವನ್ನು ಅನುಗ್ರಹಿಸಿ ಶ್ರೀಮತಿ ತೇಜಸ್ವಿನಿ ಮತ್ತು ಅವರ ಕುಟುಂಬವು ಮುಂದಿನ ನೂರಾರು ವರ್ಷಗಳ ವರೆಗೆ ಇದನ್ನು ನಡೆಸಿಕೊಂಡು ಹೋಗುವ ಶಕ್ತಿಯನ್ನು ಪಡೆಯಲಿ ಎಂಬ ಆಶೀರ್ವಾದ ನೀಡಲು ಮಹಾರಾಜರು ಇಲ್ಲಿಯ ವರೆಗೆ ಆಗಮಿಸಿದ್ದಾರೆ. ಇವರ ಕೆಲಸದ ಪ್ರಯೋಜನ ಲಕ್ಷಾಂತರ ಜನರನ್ನು ತಲುಪಲಿ ಎಂಬ ಆಶಯದೊಂದಿಗೆ ನಾವು ಮಂಗಳಹೋಮವನ್ನು ಮಾಡಿದ್ದೇವೆ. ಮಂಗಳ ಹೋಮದ ಮೂಲಕ ಲೋಕಾ ಸಮಸ್ತಾ ಸುಖಿನೋ ಭವಂತು ಎಂಬ ದೊಡ್ಡ ಪವಿತ್ರ ಶಿವಸಂಕಲ್ಪವನ್ನು ತೆಗೆದುಕೊಂಡಿದ್ದೇವೆ.

ಅಗ್ನಿಹೋತ್ರದ ಮೂಲಕ ದಿವ್ಯಚೇತನವು ಮನೆ ಮನೆಗಳಿಗೆ ಆಗಮಿಸುತ್ತದೆ. ಇದರ ಮೂಲಕ ನಿಮ್ಮ ಮನೆಗಳು ಪರಿಶುದ್ಧವಾಗುತ್ತವೆ; ಪವಿತ್ರವಾಗುತ್ತವೆ. ತನ್ಮೂಲಕ ಪ್ರತಿಯೊಂದು ಮನೆಯೂ ದೇವಾಲಯವಾಗುತ್ತದೆ, ಪ್ರತಿಯೊಬ್ಬ ವ್ಯಕ್ತಿಯೂ ನಾರಾಯಣನಾಗುತ್ತಾನೆ. ಇದು ಅಕ್ಕಲಕೋಟೆ ಗುರುಗಳ ದರ್ಶನ. ಗುರುಗಳ ದರ್ಶನವನ್ನೂ ನಾವು ಎಲ್ಲರ ಜೊತೆ ಹಂಚಿಕೊಳ್ಳಲು ಬಯಸುತ್ತೇವೆ. ಇಲ್ಲಿ ಕಲಿತ ಅಂಶಗಳನ್ನೂ ನಾವು ಅಕ್ಕಲಕೋಟೆಯಲ್ಲಿ ಪಾಲಿಸಬಯಸುತ್ತೇವೆ. ಅಕ್ಕಲಕೋಟೆಗೆ ಪ್ರತಿಯೊಬ್ಬರನ್ನೂ ಸ್ವಾಗತಿಸುತ್ತೇವೆ.

## ಗೀತೆಯ ಸಂದೇಶ



ಶ್ರೀ ಕೃಷ್ಣ ಸಂಪಗಾಂವಕರ,
ಶಾಂತಿ ಕುಟೀರ, ಕಣ್ಣೂರು

ಶ್ರೀ ಸದ್ಗುರು ಪ್ರಸನ್ನ||

**ಭಗವದ್ಗೀತಾ ಚಿಂತನ ಭಾಗ - 6**

ಜಾತಸ್ಯ ಹಿ ಧ್ರುವೋ ಮೃತ್ಯುರ್ಧ್ರುವಂ ಜನ್ಮ ಮೃತಸ್ಯ ಚ |
ತಸ್ಮಾದಪರಿಹಾರ್ಯೇಽರ್ಥೇ ನತ್ವಂ ಶೋಚಿತುಮರ್ಹಸಿ||2-27

ಅರ್ಥ : ಹುಟ್ಟಿದವನ ಸಾವು ನಿಶ್ಚಿತ ಹಾಗೂ ಮೃತನ ಹುಟ್ಟುವಿಕೆ ಖಚಿತ.ಈ ಜನ್ಮ ಮರಣದ ಪ್ರವಾಹದ ಪರಿಹಾರ ಅರ್ಥಾತ್ ನಿವಾರಣೆ ಆಗಲು ಶಕ್ಯವಿಲ್ಲ. ಹೀಗಾಗಿ ಈ ವಿಷಯದಲ್ಲಿ ಹೇ ಅರ್ಜುನ, ನೀನು ಶೋಕಿಸಬೇಡ.

ಜನ್ಮ - ಮೃತ್ಯುಗಳು ಮಾನವನು ತಪ್ಪಿಸಲಾಗದ ಪ್ರವಾಹಗಳು. ಸೂರ್ಯನ ಉದಯವಾಗಿದೆ ಎಂದರೆ ಅವನ ಅಸ್ತವೂ ಆಗಲೇಬೇಕು. ಇದು ಪ್ರಕೃತಿಯ ನಿಯಮ.. ಅದಕ್ಕಾಗಿ ಶೋಕ - ಚಿಂತೆ ಮಾಡುವುದು ವ್ಯರ್ಥ. ಮತ್ತು ಸಂಸಾರದಲ್ಲಿ ಪರಿವರ್ತನೆ ಆಗುವುದು, ಪರಿಸ್ಥಿತಿ ಬದಲಾಗುವುದು ಅವಶ್ಯಕವೇ ಆಗಿದೆ. ಹುಟ್ಟಿದವರು ಎಲ್ಲರೂ ಚಿರವಾಗಿಯೇ ಜೀವಿಸಹತ್ತಿದರೆ, ಎಷ್ಟು ಆಹಾರ ಸೃಷ್ಟಿ ಮಾಡಬೇಕಾಗುತ್ತಿತ್ತು, ಎಷ್ಟು ಮನೆಗಳ ವ್ಯವಸ್ಥೆ ಮಾಡಬೇಕಾಗುತ್ತಿತ್ತು? ಪರಿವರ್ತನೆ ರಹಿತ ಸಂಸಾರವನ್ನು ಊಹಿಸಲು ಸಹ ಅಸಾಧ್ಯ. ಪಾರಮಾರ್ಥಿಕವಾಗಿ, ಸಾಯುವುದು ಈ ಶರೀರ. ಎಷ್ಟಾದರೂ ಅದು ಪರಿವರ್ತನಶೀಲವೇ.... ಎಂದಿಗೂ ಇರುವುದು ಆತ್ಮ. ಅದು ಎಲ್ಲ ಪರಿವರ್ತನೆಗೂ ಮೀರಿರುವಂಥದ್ದು. ಈ ಅನುಭವವನ್ನು ಲಕ್ಷಿಸಿದರೆ, ಚಿಂತೆಗಳು ನಮ್ಮನ್ನು ಮುಟ್ಟಲಾರವು.

# ಸರಳ ಯೋಗಾಭ್ಯಾಸ

**ಎಸ್. ರಾಘವೇಂದ್ರ ಪ್ರಸಾದ್**
**ಅಧ್ಯಕ್ಷರು - ಸಹಬಾಳ್ವೆ**

## ಪಾದ ಹಸ್ತಾಸನ
THE HANDS TO FEET POSTURE



ಈ ಆಸನದಲ್ಲಿ ಹಸ್ತವನ್ನು ಪಾದಕ್ಕೆ ತಾಗಿಸುವುದರಿಂದ ಪಾದ ಹಸ್ತಾಸನ ಎಂದು ಕರೆಯುತ್ತಾರೆ.

**ಆಸನ ಮಾಡುವ ವಿಧಾನ-** 1) ಸಮಸ್ಥಿತಿಯಲ್ಲಿ ನೇರವಾಗಿ ನಿಂತು ಎರಡು ಪಾದಗಳ ಮಧ್ಯೆ ಎರಡು ಅಂಗುಲಗಳಷ್ಟು ಜಾಗ ಬಿಡಬೇಕು. 2) ನಿಧಾನವಾಗಿ ಉಸಿರು ತೆಗೆದುಕೊಳ್ಳುತ್ತ ಎರಡು ಕೈಗಳನ್ನು ತಲೆಯ ಮೇಲೆ ನೇರವಾಗಿ ಎತ್ತಬೇಕು 3) ಮೊದಲನೆಯ ಹಂತದಲ್ಲಿ ಉಸಿರು ಬಿಡುತ್ತ ಸೊಂಟ ಮತ್ತು ಕೈಗಳಿಂದ ನೆಲಕ್ಕೆ ಸಮಾನಾಂತರವಾಗಿ ಇಟ್ಟುಕೊಂಡು ಮುಂದಕ್ಕೆ ಬಾಗಬೇಕು 4) ನಂತರ ಮತ್ತೆ ಉಸಿರು ಬಿಡುತ್ತಾ ಸೊಂಟದ ಮೇಲ್ಭಾಗ ಕೆಳಗೆ ಬಾಗಬೇಕು. ನಿಧಾನವಾಗಿ ಬಾಗುತ್ತ ಹಸ್ತ ಅಥವಾ ಕೈ ಬೆರಳುಗಳು ಪಾದದ ಕೆಳಗಡೆ ಅಥವಾ ಪಾದದ ಬೆರಳುಗಳನ್ನು ಹಿಡಿಯಬೇಕು. ಅಥವಾ ಹೆಚ್ಚಿನ ಅಭ್ಯಾಸ ಇದ್ದವರು ಹಸ್ತಗಳನ್ನು ಎರಡು ಪಾದಗಳ ಪಕ್ಕದಲ್ಲಿ ನೆಲಕ್ಕೆ ತಾಗಿಸಿ ಇಟ್ಟಿಕೊಳ್ಳಬೇಕು. ಜೊತೆಗೆ, ತಲೆಯನ್ನು ಮೊಣಕಾಲಿನ ಹತ್ತಿರ ತಂದು ಆಳವಾಗಿ ಉಸಿರಾಡಬೇಕು. ಮೊದಮೊದಲು ಆದಷ್ಟು ಬಾಗಬೇಕು 5) ನಿಧಾನವಾಗಿ ಉಸಿರಾಡುತ್ತ ಈ ಭಂಗಿಯಲ್ಲಿ 10 ರಿಂದ 30 ಸೆಕೆಂಡುಗಳು ಇರಲು ಪ್ರಯತ್ನಿಸಬೇಕು. 6) ಮತ್ತೆ ಉಸಿರನ್ನು ಒಳಗೆ ತೆಗೆದು ಕೊಳ್ಳುತ್ತ ನಿಧಾನವಾಗಿ ಮೇಲೆ ಬರತಕ್ಕದ್ದು. 7) ಲಂಬವಾಗಿ ನಿಂತು ಕೈಗಳನ್ನು ತಲೆಯ ಮೇಲೆ ನೇರವಾಗಿ ಇಟ್ಟುಕೊಂಡು ಅಂತಿಮವಾಗಿ ಸಮಸ್ಥಿತಿಗೆ ಬಂದು ಕೊಂಚ ಹೊತ್ತು ವಿಶ್ರಾಂತಿ ಪಡೆಯುವುದು.

**ಆಸನದ ಪ್ರಯೋಜನಗಳು-** 1) ಈ ಅಭ್ಯಾಸದಿಂದ ಹೊಟ್ಟೆಯ ಭಾಗಕ್ಕೆ ಉತ್ತಮ ಶಕ್ತಿ ದೊರಕುತ್ತದೆ. ಜೀರ್ಣ ಶಕ್ತಿ ಹೆಚ್ಚುತ್ತದೆ ಹಾಗೂ ಗ್ಯಾಸ್ಟ್ರಿಕ್ ಸಮಸ್ಯೆ ಮತ್ತು ಮಲಬದ್ಧತೆ ಸಮಸ್ಯೆಗಳು ನಿಯಂತ್ರಣ ಗೊಳ್ಳುತ್ತದೆ. 2) ಪಿತ್ತ ಕೋಶ ಮತ್ತು ಮೂತ್ರಪಿಂಡಗಳು ಚೆನ್ನಾಗಿ ಕಾರ್ಯ ನಿರ್ವಹಿಸುತ್ತದೆ. 3) ಬೆನ್ನಿನ ಹುರಿ ಬಿಗಿತ ನಿವಾರಣೆಯಾಗುತ್ತದೆ.
4) ಹೆಣ್ಣುಮಕ್ಕಳ ಮುಟ್ಟಿನ ತೊಂದರೆಕಡಿಮೆಯಾಗುತ್ತಾ ಬರುತ್ತದೆ.

**ಎಚ್ಚರಿಕೆ ವಹಿಸಬೇಕಾದವರು-** ಹೃದಯ ಸಂಬಂಧಿತ ಕಾಯಿಲೆಗಳು, ಸೊಂಟ ಮತ್ತು ಬೆನ್ನು ನೋವು, ಸ್ಲಿಪ್ ಡಿಸ್ಕ್, ಹೊಟ್ಟೆ ಹುಣ್ಣು, ಹರ್ನಿಯಾ, vertigo, myopia ಸಮಸ್ಯೆ ಇರುವವರು ಹಾಗೂ ಗರ್ಭಿಣಿ ಸ್ತ್ರೀಯರು ಈ ಆಸನದಿಂದ ದೂರವಿರಬೇಕು.

ಪುಟ 1 ರಿಂದ

# ಸಮಸ್ಯೆಗಳಿಗೆಲ್ಲ ಅನಂತ ಪರಿಹಾರ!

ಈ ಸಮಸ್ಯೆಗೆ ಪರಿಹಾರವನ್ನು ಸೂಚಿಸುವಂತೆ ಅನಂತಕುಮಾರ್ ಅವರನ್ನೇ ಕೇಳಿದ್ದಾಯಿತು. ವಿದ್ಯಾರ್ಥಿ ಪರಿಷತ್ತಿನಲ್ಲಿ ಕಾರ್ಯದರ್ಶಿ, ಸಹಕಾರ್ಯದರ್ಶಿ ಎಂದು ನೇಮಿಸುವಂತೆ ಎಲ್ಲ ಕಾಲೇಜುಗಳಲ್ಲೂ ಪ್ರಮುಖ, ಸಹಪ್ರಮುಖ ಎಂದು ನೇಮಕ ಮಾಡುವಂತೆ ಅನಂತಕುಮಾರ್ ಸೂಚಿಸಿದರು. ವಿದ್ಯಾರ್ಥಿಗಳ ಪೈಕಿ ಎರಡು ಹುದ್ದೆ ಕೊಟ್ಟಹಾಗೆ ಅಂತೆಯೇ ವಿದ್ಯಾರ್ಥಿನಿಯರಲ್ಲೂ ಇಬ್ಬರನ್ನು ನೇಮಿಸುವಂತೆ ಹೇಳಿದರು. ಗದಗ್ ವಿಭಾಗದಲ್ಲಿ ಇಪ್ಪತ್ತು ಕಾಲೇಜುಗಳಿದ್ದರೆ ಪ್ರತಿ ಕಾಲೇಜಿನಿಂದ ನಾಲ್ವರು ಪ್ರತಿನಿಧಿಗಳೇ ನೇಮಕಗೊಂಡಿರುತ್ತಾರೆ. ಅವರಲ್ಲಿ ಮೀಟಿಂಗಿಗೆ ಅರ್ಧದಷ್ಟು ಜನ ಹಾಜರಾದರೂ ನೂರರಷ್ಟು ಜನ ಬಂದಹಾಗಾಗುತ್ತದೆ ಎಂದು ಅನಂತಕುಮಾರ್ ವಿಶ್ಲೇಷಿಸಿದರು.

ಅಷ್ಟೇ ಅಲ್ಲ, ಆಯಾ ಕಾಲೇಜುಗಳಿಂದ ನೇಮಕಗೊಂಡ ಪ್ರಮುಖ, ಸಹಪ್ರಮುಖರ ಭಾವಚಿತ್ರಗಳನ್ನು ಆಯಾ ಕಾಲೇಜಿನ ನೋಟೀಸ್ ಬೋರ್ಡುಗಳಲ್ಲಿ ಸವಿವರ ಪ್ರಕಟಿಸಿದರೆ ವಿದ್ಯಾರ್ಥಿಗಳಿಗೆ ಇನ್ನಷ್ಟು ಪ್ರೋತ್ಸಾಹ ಸಿಕ್ಕಂತೆ ಆಗುತ್ತದೆ ಎಂದೂ ಹೇಳಿದರು. ಈ ಉಪಾಯ ಯಶಸ್ವಿಯಾಯಿತು. ಪರಿಷತ್ತಿನ ಕಾರ್ಯಾಲಯದಲ್ಲಿ ಕಾಲಿರಿಸಲೂ ಜಾಗವಿಲ್ಲದಂತೆ ಸದಸ್ಯರು ಬಂದು ಸೇರತೊಡಗಿದರು.

******

1984. ಮೈಸೂರು ಕೃಷ್ಣಮೂರ್ತಿಪುರದ ಬಲ್ಲಾಳ್ ಸರ್ಕಲ್ ಬಳಿಯ ಒಂದು ಷೆಡ್ ನಲ್ಲಿ ಪರಿಷತ್ತಿನ ಕಾರ್ಯಾಲಯ. ಅನಂತಕುಮಾರ್ ಅಲ್ಲಿ ಬೈಠಕ್ ಕಾರ್ಯಕ್ರಮಕ್ಕೆ ಬರುವಾಗಲೆಲ್ಲ ನ್ಯಾಶನಲ್ ಇಂಜಿನಿಯರಿಂಗ್ ಕಾಲೇಜಿನ ಹಾಸ್ಟೆಲ್ಲಿಗೆ ಊಟಕ್ಕೆ ಬರುತ್ತಿದ್ದರು. ರಾತ್ರಿ ಊಟವಾದಮೇಲೆ ಸಮೀಪದ ಗೂಡಂಗಡಿಯ ಎದುರಿಗೆ ನಿಂತು ಗೆಳೆಯರೊಡನೆ ಹರಟೆ ಸಾಗುತ್ತಿತ್ತು. ನಡುನಡುವೆ ಬೈಟು ಕಾಫಿ ಸಮಾರಾಧನೆ. ಗೆಳೆಯರ ಹರಟೆಗೇನೂ ಹೊತ್ತುಗೊತ್ತಿಲ್ಲ. ರಾತ್ರಿ ಹನ್ನೆರಡೋ ಒಂದೋ ದಾಟಿದ ಮೇಲೆಯೇ ಅವರು ಅಲ್ಲಿಂದ ಹೊರಡುವವರು. ಗೆಳೆಯರು ಅನಂತಕುಮಾರರನ್ನು ಬಲ್ಲಾಳ್ ಸರ್ಕಲ್ಲಿಗೆ ತಲುಪಿಸಿ ಹಿಂತಿರುಗುವರು.

ಆಗಿನ ಕಾಲಕ್ಕೆ ಇಂಜಿನಿಯರಿಂಗ್ ಕಾಲೇಜಿನಲ್ಲಿ ಅನೇಕ ಸಮಸ್ಯೆಗಳು ತಲೆದೋರಿದ್ದವು. ವಿದ್ಯಾರ್ಥಿಗಳು ತಮ್ಮ ಸಂಕಷ್ಟಗಳ ಕಡೆಗೆ ಆಡಳಿತ ಮಂಡಳಿಯ ಗಮನ ಸೆಳೆಯಲು ಅದೆಷ್ಟೇ ಪ್ರಯತ್ನಿಸಿದರೂ ವ್ಯವಸ್ಥಾಪಕರು ಸಮಸ್ಯೆಗಳನ್ನು ಬಗೆಹರಿಸಲು ಮನಸ್ಸುಮಾಡಿರಲಿಲ್ಲ. ವಿದ್ಯಾರ್ಥಿ ಪರಿಷತ್ತಿನ ಬೈಠಕ್ಕಿನಲ್ಲಿ ಈ ವಿಷಯದ ಬಗೆಗೆ ಚರ್ಚೆ ನಡೆಯಿತು. ಅನಿರೀಕ್ಷಿತವಾಗಿ ಅಂದು ಅನಂತಕುಮಾರರೂ ಬೈಠಕ್ಕಿನಲ್ಲಿ ಉಪಸ್ಥಿತರಿದ್ದರು. ಇಲ್ಲಿ ಇಷ್ಟೊಂದು ಸಮಸ್ಯೆಗಳಿವೆ ಎಂದಮೇಲೆ ಪ್ರಬಲವಾದ ಅಸ್ತ್ರವನ್ನೇ ಹೂಡಬೇಕು ಎಂದು ಅನಂತಕುಮಾರ್ ಹೇಳಿದರು.




ಅಂತಹ ಅಸ್ತ್ರ ಎಂದರೆ ಹೋರಾಟ, ಚಳುವಳಿ. ನಾಳೆಯಿಂದ ವಿದ್ಯಾರ್ಥಿ ಚಳುವಳಿ ಪ್ರಾರಂಭಿಸಿ, ನಿಮ್ಮ ಸಮಸ್ಯೆ ಇತ್ಯರ್ಥವಾಗುತ್ತದೆ ಎಂದರು.

ಮಾರನೆಯ ದಿನ ಚಳುವಳಿ ಘೋಷಣೆಯಾಯಿತು. ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಹೊರಬಂದರು. ಎರಡು ಮೂರು ದಿನಗಳು ಹೀಗೆಯೇ ನಡೆದವು. ಆದರೆ ಕಾಲೇಜಿನ ಆಡಳಿತಮಂಡಳಿ ವಿದ್ಯಾರ್ಥಿಗಳ ಕೂಗಿಗೆ ಕಿವಿಗೊಡಲೇ ಇಲ್ಲ. ಮುಂದೇನು ಮಾಡುವುದೆಂದು ಚರ್ಚೆಯಾಗುವಾಗ ಅನಂತಕುಮಾರರ ಸಲಹೆಯನ್ನು ಕೇಳಿದರು. ಮೊದಲನೆಯ ಉಪಾಯ ಯಶಸ್ವಿಯಾಗದಿದ್ದರೆ ಮತ್ತೊಂದು ತಂತ್ರ ಇರಲೇಬೇಕಲ್ಲ! ನಾಳೆಯಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ಎಂದು ಪ್ರಕಟಿಸಿ ಕುಳಿತುಕೊಳ್ಳಿ ಎಂದರು.

ವಿದ್ಯಾರ್ಥಿಗಳು ಆಮರಣಾಂತ ಉಪವಾಸ ಸತ್ಯಾಗ್ರಹ ಘೋಷಿಸಿ ಸಾಲಾಗಿ ಕುಳಿತರು. ಮಾರನೆಯ ದಿನವೇ ಆಡಳಿತ ಮಂಡಳಿ ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸಲು ಒಪ್ಪಿಕೊಂಡಿತು.

ಅದುವರೆಗೆ ಅಷ್ಟಾಗಿ ಪ್ರಚಾರಪಡೆಯದಿದ್ದ ವಿದ್ಯಾರ್ಥಿ ಪರಿಷತ್ತು ಕಾಲೇಜಿನಲ್ಲಿ ಭದ್ರನೆಲೆ ಪಡೆಯುವುದಕ್ಕೂ ಈ ಹೋರಾಟ ಅವಕಾಶಮಾಡಿಕೊಟ್ಟಿತು.

# ನಾನ್ನದಾನಾತ್ ಪರಂ ದಾನಂ

ಈ ಜಗತ್ತಿನಲ್ಲಿ ಪ್ರತಿಯೊಬ್ಬರಿಗೂ ಅನ್ನ, ವಸ್ತ್ರ, ನಿವಾಸಗಳು ಅನಿವಾರ್ಯ. ವಸ್ತ್ರವಿಲ್ಲದಿದ್ದರೆ ಮರದ ಎಲೆಗಳಿಂದ ಮೈ ಮುಚ್ಚಿಕೊಳ್ಳಬಹುದು; ನಿವಾಸವಿಲ್ಲದಿದ್ದರೆ ಗಿಡ ಮರಗಳ ಕೆಳಗೆ, ಗವಿಗಳಲ್ಲಿ ಆಶ್ರಯ ಪಡೆಯಬಹುದು. ಆದರೆ, ಅನ್ನಮಯ ಪ್ರಾಣವಿರುವ ಈ ಕಾಲದಲ್ಲಿ ಅನ್ನವಿಲ್ಲದಿದ್ದರೆ ಬದುಕುವುದು ಕಷ್ಟ. "ಅನ್ನಾತ್ ಭವಂತಿ ಭೂತಾನಿ ಪರ್ಜನ್ಯಾದನ್ನಸಂಭವಃ" ಎಂದು ಭಗವಾನ್ ಶ್ರೀಕೃಷ್ಣ ಭಗವದ್ಗೀತೆಯಲ್ಲಿ ಹೇಳಿದ್ದಾನೆ (ಅಧ್ಯಾಯ ೩, ಶ್ಲೋಕ ೧೪). ಜಗತ್ತಿನ ಸಕಲ ಜೀವಿಗಳೂ ಅನ್ನದಿಂದಲೇ ಹುಟ್ಟಿರುವುದು ಹಾಗೂ ಅನ್ನದಿಂದಲೇ ಬೆಳೆಯುವುದು.

"ಅನ್ನಂ ಪರಬ್ರಹ್ಮ ಸ್ವರೂಪಮ್" ಎನ್ನುತ್ತಾರೆ. "ಅನ್ನಂ ಹಿ ಭೂತಾನಾಂ ಜ್ಯೇಷ್ಠಮ್, ತಸ್ಮಾತ್ ಸರ್ವೌಷಧಮುಚ್ಯತೇ" ಎಂದೂ ಹೇಳುತ್ತಾರೆ. ಈ ಅನ್ನವೇ ಎಲ್ಲರಿಗೂ ಪ್ರಪ್ರಥಮವಾದ ಔಷಧ. ಹಿತಮಿತವಾಗಿ ಊಟ ಮಾಡಿದರೆ ಅನ್ನವು ಔಷಧವೇ ಆಗುತ್ತದೆ. "ಯುಕ್ತಾಹಾರವಿಹಾರಸ್ಯ ಯುಕ್ತಚೇಷ್ಟಸ್ಯ ಕರ್ಮಸು ಯುಕ್ತಸ್ವಪ್ನಾವಬೋಧಸ್ಯ ಯೋಗೋ ಭವತಿ ದುಃಖಹಾ" ಯುಕ್ತವಾದ ಪರಿಶುದ್ಧ, ಸಾತ್ವಿಕ, ಆಹಾರವನ್ನು ಸೇವಿಸುವ ವ್ಯಕ್ತಿಯ ಕಷ್ಟಗಳನ್ನು ಯೋಗವು ನಿವಾರಿಸುತ್ತದೆ ಎಂದು ಕೃಷ್ಣನೇ ಗೀತೆಯ ಆರನೆಯ ಅಧ್ಯಾಯದಲ್ಲಿ ಹೇಳಿದ್ದಾನೆ. "ಜೈಸೇ ಅನ್ ವೈಸೇ ಮನ್" ಎಂಬ ಮಾತನ್ನೂ ನೀವು ಕೇಳಿದ್ದೀರಿ.

"ಆಹಾರಶುದ್ಧೌ ಸತ್ತ್ವಶುದ್ಧಿಃ ಸತ್ತ್ವಶುದ್ಧೌ ಧ್ರುವಾ ಸ್ಮೃತಿಃ" ಎಂದು ಛಾಂದೋಗ್ಯೋಪನಿಷತ್ತು ಹೇಳುತ್ತದೆ. ಸತ್ತ್ವ ಎಂದರೆ ಮನಸ್ಸು. ಮನಸ್ಸು ಶುದ್ಧವಾಗಿರಲು ಶುದ್ಧವಾದ ಆಹಾರ ಸೇವಿಸಬೇಕು. ಮನಸ್ಸು ಶುದ್ಧವಾದರೆ ಧ್ರುವಾ ಸ್ಮೃತಿಃ – ಸ್ಮೃತಿಯು ಧ್ರುವ ಎಂದರೆ ಸ್ಥಿರವಾಗಿರುತ್ತದೆ. ಸ್ಥಿರವಾದ ಮನಸ್ಸನ್ನು ಹೊಂದಿದ ಸಾಧಕ ಯಾವತ್ತೂ ದುಃಖಿಯಾಗುವುದು ಸಾಧ್ಯವಿಲ್ಲ.

ಹೀಗಾಗಿ, ಮನಸ್ಸನ್ನು ಶುದ್ಧವಾಗಿರಿಸಿಕೊಳ್ಳಲು ನಮಗೆ ಸಾತ್ವಿಕವಾದ ಪೌಷ್ಟಿಕ ಆಹಾರ ಬೇಕು. ಶ್ರೀಮತಿ ತೇಜಸ್ವಿನಿ ಅನಂತಕುಮಾರರು ಕರ್ನಾಟಕದಲ್ಲಿ ಮಾತ್ರವಲ್ಲ, ದೂರದ ಜೋಧಪುರದಲ್ಲಿಯೂ ಲಕ್ಷಾಂತರ ಮಕ್ಕಳಿಗೆ ಅದಮ್ಯಚೇತನ ಸಂಸ್ಥೆಯ ಮೂಲಕ ಅನ್ನವನ್ನು ಒದಗಿಸುವ ಮಹತ್ಕಾರ್ಯ ನಡೆಸುತ್ತಿದ್ದಾರೆ. ಇಂತಹ ಸಂಸ್ಥೆ ನಮ್ಮ ಕರ್ನಾಟಕದಲ್ಲಿದೆ, ಅದರಲ್ಲೂ ನಮ್ಮ ಕ್ಷೇತ್ರದಲ್ಲಿ, ನಮ್ಮ ನೆರೆಯಲ್ಲಿ ಇದೆಯೆನ್ನುವುದು ನಮಗೆ ಹೆಮ್ಮೆ ತರುವ ವಿಷಯ. ನಮಗೆ ಏನೇನೋ ದೊರೆಯಬಹುದು. ಆದರೆ ಅನ್ನದಾತ, ಅನ್ನಪೂರ್ಣೇಶ್ವರಿ ಸಿಗುವುದು ಬಹಳ ಕಷ್ಟ. ಎಲ್ಲ ಪ್ರಾಚೀನ ಪುರಾಣೇತಿಹಾಸಗಳನ್ನೂ ಧರ್ಮಶಾಸ್ತ್ರಗಳನ್ನೂ ಆಚಾರ್ಯರ ಮಾತುಗಳನ್ನೂ ಗಮನಿಸಿದರೆ "ನಾನ್ನದಾನಾತ್ ಪರಂ ದಾನಂ" ಎಂಬ ಶ್ರುತಿವಾಕ್ಯವೇ ಕಾಣಿಸುತ್ತದೆ. ಹೀಗಾಗಿ ಲಕ್ಷಾಂತರ ಬಡ ಮಕ್ಕಳಿಗೆ, ವಿದ್ಯಾರ್ಥಿಗಳಿಗೆ ಮಧ್ಯಾಹ್ನದ ಊಟ ಒದಗಿಸುವುದಕ್ಕಿಂದ ಉತ್ತಮ ಕಾರ್ಯ ಬೇರೊಂದಿಲ್ಲ. ಈ ವಿದ್ಯಾರ್ಥಿಗಳಲ್ಲಿ ಯಾರು ಬೇಕಾದರೂ ಮುಂದೊಂದು ದಿನ ಪ್ರಧಾನಿಯಾಗಬಹುದು, ಸಾಧುಗಳಾಗಬಹುದು, ವಿಶೇಷ ಸಾಧಕರಾಗಬಹುದು, ಪ್ರಾಚಾರ್ಯರೂ ಆಗಬಹುದು. ಅದಮ್ಯ ಚೇತನದ ಈ ದಿವ್ಯವಾದ ಕಾರ್ಯವನ್ನು ಅನುಗ್ರಹಿಸುವುದಕ್ಕಾಗಿಯೇ ಸಾಕ್ಷಾತ್ ಅನ್ನಪೂರ್ಣೇಶ್ವರಿಯೇ ಕಾಶಿಯಿಂದ ಬಂದು ಇವರ ಅಡುಗೆ ಮನೆಯಲ್ಲಿ ನೆಲೆಸಿದ್ದಾಳೆ ಎಂದು ನಮ್ಮ ನಂಬಿಕೆ. "ಅದ್ಯತೇ ಅತ್ತಿ ಚ ಭೂತಾನಿ ತಸ್ಮಾದನ್ನಂ ತದುಚ್ಯತ ಇತಿ" ಯಾವುದನ್ನು ತಿಂದು ಜೀವಿಗಳು ಬದುಕುತ್ತಾವೆಯೋ ಅದು ಅನ್ನ ಎಂದರ್ಥ. "ಅನ್ನಮಯಂ ಹಿ ಸೋಮ್ಯಮನ" ಮನಸ್ಸೆಂಬುದು ಅನ್ನಮಯ ಎಂದೂ ಛಾಂದೋಗ್ಯ ಉಪನಿಷತ್ತಿನಲ್ಲಿ ಹೇಳಿದೆ. ನಾವು ಅನ್ನವನ್ನು ತಿಂದುಹೋಗು ಎಂದು ತಾತ್ಸಾರದಿಂದ ಹೇಳುವುದಿಲ್ಲ. ದೇಹದ ಒಳಗಿರುವ ಜೀವಾತ್ಮ ಎಂಬ ಬ್ರಹ್ಮನಿಗೆ ಕೂಡ ಜೀವನವನ್ನು ಕೊಡುವ ಕೆಲಸವನ್ನು ಅನ್ನ ಮಾಡುತ್ತದೆ. ಆದುದರಿಂದಲೇ ಇದನ್ನು ಅನ್ನಬ್ರಹ್ಮ ಎಂದು ಕರೆಯುತ್ತೇವೆ. "ಸಸ್ಯಂ ಕ್ಷೇತ್ರಗತಂ ಪ್ರೋಕ್ತಂ ಸತುಷಂ ಧಾನ್ಯಮುಚ್ಯತೇ ಅಮಂ ತು ವಿತುಷಂ ಪ್ರೋಕ್ತಂ ಸ್ವಿನ್ನಮನ್ನಮುದಾಹೃತಮ್" ಎಂಬ ವಿಶೇಷವಾದ ಉಲ್ಲೇಖ ಕಲ್ಪದ್ರುಮದಲ್ಲಿ ಬರುತ್ತದೆ. ಹೀಗೆ ಅನ್ನದ ಬಗ್ಗೆ ವೇದಗಳಲ್ಲಿ, ಪುರಾಣಗಳಲ್ಲಿ, ಗೀತೆಯಲ್ಲಿ, ಉಪನಿಷತ್ತುಗಳಲ್ಲಿ ಸಾಕಷ್ಟು ಪ್ರಸ್ತಾಪಗಳು ಕಾಣಿಸುತ್ತವೆ.



**ಶ್ರೀ ಶ್ರೀ ಶ್ರೀ ಮಂಜುನಾಥ ಭಾರತೀ ಮಹಾಸ್ವಾಮಿಗಳು**
ಶ್ರೀ ಗೋಸಾಯಿ ಮಹಾಸಂಸ್ಥಾನ ಮಠ, ಬೆಂಗಳೂರು

ನಾವು ಬಹಳಷ್ಟು ಕಾಲ ಕಾಶಿಯಲ್ಲಿ ವಾಸವಾಗಿದ್ದು ಆ ಕಾಲದಲ್ಲಿ ಅನಂತಕುಮಾರರ ಭಾಷಣವನ್ನು ಕೇಳಿಸಿಕೊಂಡಿದ್ದೇವೆ. ಅವರು ಇನ್ನೂ ದೊಡ್ಡ ಸಾಧನೆ ಮಾಡಬಹುದಿತ್ತು. ಅವರನ್ನು ಬಹಳ ಬೇಗ ಕಳೆದುಕೊಂಡೆವು. ಆದರೂ ಅವರು ಪ್ರಾರಂಭಿಸಿದ ಪುಣ್ಯಕಾರ್ಯಗಳನ್ನು ಶ್ರೀಮತಿ ತೇಜಸ್ವಿನಿಯವರು ಮುಂದುವರಿಸಿಕೊಂಡು ಹೋಗುತ್ತಿದ್ದಾರೆ. ಬಲಗೈಯಿಂದ ಕೊಟ್ಟದ್ದನ್ನು ಎಡಗೈಯೂ ತಿಳಿಯದಿರಲಿ ಎಂಬ ಸಂಕೋಚದ ಸ್ವಭಾವದ ಶ್ರೀಮತಿ ತೇಜಸ್ವಿನಿಯವರಿಗೆ ಅನಂತಕುಮಾರರ ಸಂಕಲ್ಪಗಳನ್ನು ಪೂರೈಸುವ ಮತ್ತು ಇನ್ನೂ ಹೆಚ್ಚಿನ ಸಾಧನೆ ಮಾಡುವ ಶಕ್ತಿಯನ್ನು ದೇವರು ನೀಡಲಿ ಎಂದು ನಾವು ಪ್ರಾರ್ಥಿಸುತ್ತೇವೆ.

||ಹರಿಃ ಓಮ್||

## ಪುಟ 1 ರಿಂದ ನಿಮ್ಮ ಜೀವದಯೆ ಪಕ್ಷಿಗಳಿಗೆ ಮಾರಕವಾದೀತು!

ನಗರಗಳಲ್ಲಿ ಪಾರಿವಾಳಗಳಿಗೆ ಕಾಳುಹಾಕುವ ಪದ್ಧತಿಯಿರುವುದರಿಂದ ಅವುಗಳ ಸಂತತಿಯಲ್ಲಿ ಅಗಾಧಪ್ರಮಾಣದ ಏರಿಕೆಯಾಗಿರುವುದನ್ನೂ ನೋಡುತ್ತೇವೆ. ಇದರಿಂದ ನಗರಗಳಲ್ಲಿ ಆರೋಗ್ಯದ ಸಮಸ್ಯೆಯೂ ಉಂಟಾಗುತ್ತಿದೆ. ಮಾನವರಂತೆಯೇ ಪಶುಪಕ್ಷಿಗಳಿಗೂ ನಗರಗಳಲ್ಲಿ ವಾಸಮಾಡುವ ಹಕ್ಕಿದೆ. ಕಾಡುಗಳಲ್ಲಿ ಪ್ರಾಣಿಗಳ ಜೀವನಕ್ಕೆ ಪೂರಕ ವಾತಾವರಣ ಹೇಗೆ ಅಗತ್ಯವೋ ಅದೇ ರೀತಿ ನಾಡಿನಲ್ಲಿಯೂ ಪ್ರಾಣಿ ಪಕ್ಷಿಗಳಿಗೆ ಬದುಕಲು ಸಹ್ಯವಾದ ವಾತಾವರಣವಿರಬೇಕು. ಇಂತಹ ವಾತಾವರಣವನ್ನು ಕಲ್ಪಿಸುವುದು ನಮ್ಮ ಕರ್ತವ್ಯ ಎಂದು ಅದಮ್ಯ ಚೇತನ ಸಂಸ್ಥೆ ಭಾವಿಸುತ್ತದೆ. ಪ್ರಾಣಿ, ಪಕ್ಷಿ ಮತ್ತು ಪರೋಪಕಾರಿ ಕೀಟಗಳು ಪರಿಸರ ವ್ಯವಸ್ಥೆಯ ಅನಿವಾರ್ಯ ಅಂಗಗಳು ಎಂಬ ಹಿನ್ನೆಲೆಯಲ್ಲಿ ನಗರ ಪ್ರದೇಶಗಳ ಪ್ರಾಣಿ, ಪಕ್ಷಿಗಳಿಗೆ ಹಿತವಲ್ಲದ ಆಹಾರವನ್ನು ನೀಡದಿರುವಂತೆ ಕ್ರಮ ತೆಗೆದುಕೊಳ್ಳುವ ಅಗತ್ಯವಿದೆ. ಈ ನಿಟ್ಟಿನಲ್ಲಿ ಸರಕಾರದ ನಡೆಗಾಗಿ ಕಾಯದೆ ಜನಜಾಗೃತಿ ಮೂಡಿಸುವುದು ಈ ಕ್ಷಣದ ತುರ್ತು ಅಗತ್ಯ.

ಪಕ್ಷಿಗಳ ಜೀರ್ಣಾಂಗವ್ಯವಸ್ಥೆಗೆ ಒಗ್ಗದ, ಅವುಗಳಿಗೆ ಸಹಜವಲ್ಲದ, ಅವುಗಳ ಆರೋಗ್ಯಕ್ಕೆ ಮಾರಕವಾದ ಆಹಾರವನ್ನು ನೀಡಬಾರದು ಎಂಬ ವಿಷಯದ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ಕಾರ್ಯಕ್ರಮವನ್ನು ಅದಮ್ಯ ಚೇತನ ಸಂಸ್ಥೆ ಮತ್ತು ಅನಂತಕುಮಾರ್ ಪ್ರತಿಷ್ಠಾನಗಳು ಬೆಂಗಳೂರಿನ ಸಸ್ಯಕಾಶಿ ಕೆಂಪುತೋಟ (ಲಾಲ್‌ಬಾಗ್) ದಲ್ಲಿ ಜಂಟಿಯಾಗಿ ಹಮ್ಮಿಕೊಂಡಿದ್ದವು. ದಿನಾಂಕ 04-02-2023 ರಂದು ನಡೆದ ಈ ಕಾರ್ಯಕ್ರಮದ ನೇತೃತ್ವವನ್ನು ಅದಮ್ಯಚೇತನ ಸಂಸ್ಥೆಯ ಅಧ್ಯಕ್ಷೆ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ವಹಿಸಿದ್ದರು. "ಪ್ರಾಣಿ ಪಕ್ಷಿಗಳಿಗೆ ಆಹಾರ ಕೊಟ್ಟು ಪುಣ್ಯ ಪಡೆದುಕೊಳ್ಳುತ್ತೇವೆ ಎಂಬ ಭ್ರಮೆಯಲ್ಲಿ ಕೆಲ ಜನರು ಬ್ರೆಡ್, ಬೂಂದಿ, ಹಾಗೂ ಕಾಳುಗಳನ್ನು ಹಾಕುವುದರ ಮೂಲಕ ಪಕ್ಷಿಗಳ ಆಹಾರ ಸರಪಳಿಯನ್ನು ಬದಲಾಯಿಸುವ ಪ್ರಕ್ರಿಯೆಗೆ ಅನುವು ಮಾಡಿಕೊಡುತ್ತಿದ್ದಾರೆ. ಸಂಸ್ಕರಿತ ಆಹಾರ ಕೊಡುವುದರಿಂದ ಅವುಗಳ ಜೀರ್ಣಶಕ್ತಿ ಕುಂದಿ ಅನಾರೋಗ್ಯಕ್ಕೆ ತುತ್ತಾಗುತ್ತವೆ. ಅವು ತಮ್ಮ ಆಹಾರ ಹುಡುಕಿಕೊಳ್ಳದೆ ನಾವು ಕೊಡುವ ಆಹಾರಕ್ಕೆ ಕಾದು ಕುಳಿತುಕೊಂಡು, ಪ್ರಕೃತಿಯ ಏರುಪೇರಿಗೂ ಕಾರಣವಾಗುತ್ತವೆ. ಪಕ್ಷಿಗಳಿಗೆ ಅವುಗಳ ಆಹಾರವನ್ನು ಅವುಗಳೇ ಹುಡುಕಿ ತಿನ್ನಲು ಬಿಡೋಣ. ಪಕ್ಷಿಗಳಿಗೆ ಪರಾವಲಂಬಿ ಜೀವನವನ್ನು ಕಲಿಸಬಾರದು. ಅವುಗಳ ಜೀವನದಲ್ಲಿ ಮಾನವ ಹಸ್ತಕ್ಷೇಪ ಬೇಡ, ಅವುಗಳಿಗೆ ಸ್ವತಂತ್ರವಾಗಿ ಇರುವುದಕ್ಕೆ ಬಿಡೋಣ" ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ವೈಜ್ಞಾನಿಕ ಮಾಹಿತಿಯೊಳಗೊಂಡ 25 ಕ್ಕೂ ಹೆಚ್ಚಿನ ಫಲಕಗಳೊಂದಿಗೆ ಅದಮ್ಯ ಚೇತನದ ಕಾರ್ಯಕರ್ತರು, ಬಿಎಂಎಸ್ ಕಾಲೇಜ್ ಮತ್ತು ನೃಪತುಂಗ ಕಾಲೇಜಿನ ವಿದ್ಯಾರ್ಥಿಗಳು ಪಾಲ್ಗೊಂಡು ಲಾಲ್‌ಬಾಗಿನ ಒಳಗೆ ಜಾಥಾ ನಡೆಸಿದರು. ಶ್ರೀ ಹೆಚ್ ಎನ್ ಎ ಪ್ರಸಾದ್, ಕು. ವಿಜೇತಾ ಅನಂತಕುಮಾರ್, ಮೀರಾ ಫಡಕೆ, ರಾಜ್ಯ ನಡಿಗೆದಾರರ ಸಂಘದ ಅಧ್ಯಕ್ಷರಾದ ಶ್ರೀ ರವಿಚಂದ್ರ, ಶ್ರೀ ಗೋಪಿನಾಥ, ಶ್ರೀ ಆನಂದ ಮೊದಲಾದ ಹಿರಿಯರು ಭಾಗವಹಿಸಿದ ಈ ಕಾರ್ಯಕ್ರಮದಿಂದ ಜನಜಾಗೃತಿಯುಂಟಾಗಿ ಪಶುಪಕ್ಷಿಗಳಿಗೆ ಸಹ್ಯವಾದ ವಾತಾವರಣ ನಿರ್ಮಾಣಕ್ಕೆ ನಾಂದಿಯಾಗಲಿ ಎಂಬುದು ಆಯೋಜಕರ ಆಶಯ.



ಸಸ್ಯಲೋಕ ಪರಿಚಯ ಮಾಲಿಕೆ- 17

# ಪಾರಿಜಾತ

**ಕೃಷಿ ವಿವರ:** ದಕ್ಷಿಣ ಭಾರತದ ಉದ್ಯಾನವನಗಳಲ್ಲಿ ಈ ಮರವನ್ನು ಬಹಳ ಹಿಂದಿನಿಂದಲೂ ಬೆಳೆಸುತ್ತಿದ್ದಾರೆ. ಇದು ಅಸ್ಸಾಂ ಮುಂತಾದ ಈಶಾನ್ಯ ಭಾರತದ ಕಾಡುಗಳಲ್ಲಿ ಸಹಜವಾಗಿ ಬೆಳೆಯುತ್ತದೆ. ಕರ್ನಾಟಕ ಹಾಗೂ ಮಹಾರಾಷ್ಟ್ರದ ಮಣ್ಣು ಹಾಗೂ ಪರಿಸರ ಕೂಡ ಇದಕ್ಕೆ ಬಹಳ ಅನುಕೂಲಕರವಾಗಿದೆ. ರಸ್ತೆಯ ಅಕ್ಕ ಪಕ್ಕಗಳಲ್ಲೂ ಈ ಗಿಡಗಳನ್ನು ಬೆಳೆಸುತ್ತಾರೆ.

ಬೀಜ, ಮತ್ತು ಕಾಂಡಕೃಷಿ - ಎರಡೂ ರೀತಿಯಲ್ಲಿ ಪಾರಿಜಾತದ ಸಸಿ ತಯಾರು ಮಾಡಬಹುದು.

ನೈಕ್ಟಾಂತೀಸ್ ಆರ್ಬರ್ ಟ್ರಿಸ್ಟಿಸ್ ಎಂಬ ವೈಜ್ಞಾನಿಕ ಹೆಸರಿನ ಪಾರಿಜಾತವು ಪಶ್ಚಿಮ ಬಂಗಾಳದ ರಾಜ್ಯ ಪುಷ್ಪವೆಂದು ಪರಿಗಣಿತವಾಗಿದೆ. ಮಂದಾರ, ಸಂತಾನ, ಕಲ್ಪವೃಕ್ಷ, ಹರಿಚಂದನಗಳ ಜೊತೆಗೆ ಪಾರಿಜಾತವೂ ಪವಿತ್ರ ಪಂಚವೃಕ್ಷಗಳಲ್ಲೊಂದು ಎಂದು ಪರಿಗಣಿತವಾಗಿದೆ. ಸಾಮಾನ್ಯವಾಗಿ, ನೆಲದ ಮೇಲೆ ಉದುರಿದ ಹೂವುಗಳನ್ನು ದೇವರಿಗೆ ಅರ್ಪಿಸುವುದಿಲ್ಲ; ಅದರೆ, ಪಾರಿಜಾತ ಮತ್ತು ಬಕುಲದ ಹೂವುಗಳಿಗೆ ಈ ವಿಷಯದಲ್ಲಿ ವಿನಾಯಿತಿಯಿದೆ. ಕಾವ್ಯ, ಪುರಾಣ, ಯಕ್ಷಗಾನ ಪ್ರಸಂಗಗಳಲ್ಲಿ ಪಾರಿಜಾತದ ಪ್ರಸ್ತಾಪ ಯಥೇಚ್ಛವಾಗಿ ಕಾಣಿಸುತ್ತದೆ. ಪಾರಿಜಾತವನ್ನು ತಿಳಿವಳಿಕೆ ಮತ್ತು ಜ್ಞಾನದ ಸಂಕೇತವೆಂದು ಭಾವಿಸಲಾಗುತ್ತದೆ.

ಸಮುದ್ರ ಮಥನ ಕಾಲದಲ್ಲಿ ಸುರಭಿ ಮತ್ತು ವಾರಿಣಿಯ ನಂತರ ಜನಿಸಿದ್ದು ಪಾರಿಜಾತ. ಕ್ಷೀರ ಸಮುದ್ರದಿಂದ ಹುಟ್ಟಿದ ೫ ಕಲ್ಪವೃಕ್ಷಗಳಲ್ಲಿ ಇದೂ ಒಂದು. ನಂತರ ಇಂದ್ರನ ನಂದನವನದಲ್ಲಿ ಪಲ್ಲವಿಸಿತು. ಕೃಷ್ಣಾವತಾರ ಕಾಲದಲ್ಲಿ, ಶ್ರೀಕೃಷ್ಣನು ಪಾರಿಜಾತವನ್ನು ಸ್ವರ್ಗಲೋಕದಿಂದ ತಂದು ಸತ್ಯಭಾಮೆಯ ಅಂಗಳದಲ್ಲಿ ನೆಟ್ಟನೆಂಬ ಕಥೆ ಇದೆ. ಕೃಷ್ಣಪರಮಾತ್ಮನಿಗೆ ಪಾರಿಜಾತ ಪುಷ್ಪವನ್ನು ಕಂಡರೆ ಪ್ರಾಣ. ಇಂದಿಗೂ ಹಿಂದೂ ಮಂದಿರಗಳಲ್ಲಿ, ಬೌದ್ಧಮಂದಿರಗಳಲ್ಲಿ ಈ ಗಿಡಗಳನ್ನು ಬೆಳೆಸಿ ಹೂವುಗಳನ್ನು ದೇವರಿಗೆ ಅರ್ಪಿಸುತ್ತಾರೆ. ಗ್ರೀಕ್ ಪುರಾಣದಲ್ಲಿಯೂ ಪಾರಿಜಾತದ ಕಥೆ ಇದೆ.

**ಸಸ್ಯವಿವರ:** ಚಳಿಗಾಲದಲ್ಲಿ ಎಲೆ ಉದುರಿಸುವ ಪಾರಿಜಾತವು ಮಧ್ಯಮ ಗಾತ್ರದ ಪೊದರು ಅಥವಾ ಚಿಕ್ಕಮರದಂತಿರುತ್ತದೆ. ಸುಮಾರು ನಾಲ್ಕು ಮೀಟರ್ ವರೆಗೆ ಬೆಳೆಯುವ ಮರದ ರೆಂಬೆಗಳು ಬಾಗಿಕೊಂಡಿರುತ್ತವೆ. ನಾಲ್ಕೂ ದಿಕ್ಕುಗಳಲ್ಲಿ ಹರಡಿಕೊಂಡು ಬೆಳೆಯುವ ಪಾರಿಜಾತದ ಎಲೆಗಳು ಹೃದಯದ ಆಕಾರದಲ್ಲಿದ್ದು ತುದಿ ಮೊನಚಾಗಿರುತ್ತದೆ. ಚಿಕ್ಕ ತೊಟ್ಟು, ಒರಟು ಎಲೆಗಳು ಬೂದುಮಿಶ್ರಿತ ಹಸಿರು ಬಣ್ಣಹೊಂದಿರುತ್ತವೆ. ಮಲ್ಲಿಗೆ ಹೂವಿನಂತಹ ನಾಜೂಕು ಹೂವುಗಳು ಹಿತಮಿತವಾದ ಸ್ವರ್ಗೀಯ ಸುವಾಸನೆ ಹೊಂದಿರುತ್ತವೆ, ಗೊಂಚಲು ಗೊಂಚಲಾಗಿ ಅರಳುತ್ತವೆ. ಐದರಿಂದ ಎಂಟು ಪಕಳೆಗಳನ್ನು ಹೊಂದಿದ ಬಿಳಿ ಹೂವಿಗೆ ಹವಳಗೆಂಪಿನ ನಾಳವಿರುತ್ತದೆ. ಮುಟ್ಟಿದರೆ ಕಳಚಿಕೊಳ್ಳುವಂತಿರುವ ಹೂವುಗಳು ಜುಲೈ ತಿಂಗಳಿನಿಂದ ನವೆಂಬರ್ ತಿಂಗಳಿನ ವರೆಗೆ ಸಮೃದ್ಧಿಯಾಗಿ ಅರಳುತ್ತವೆ. ಕಾಯಿಗಳು ಗುಂಡಾಗಿರುತ್ತವೆ. ಪಾರಿಜಾತದ ಹೂವಿನ ಕಾಲ ಮುಗಿದಮೇಲೆ ಬೀಜಗಳನ್ನು ಸಂಗ್ರಹಿಸಿ ಇಡಬಹುದು.

**ಉಪಯೋಗಗಳು:** ದೇವರ ಪೂಜೆಗೆ ಬಹಳ ಶ್ರೇಷ್ಠವಾದ ಹೂವು, ಪಾರಿಜಾತ. ಇದರ ಹೂವಿನ ಕೆಂಪು ತೊಟ್ಟಿನಿಂದ ಬಟ್ಟೆಗೆ ಹಾಕುವ ನೈಸರ್ಗಿಕ ಬಣ್ಣವನ್ನು ತಯಾರಿಸುತ್ತಾರೆ. ಸುಗಂಧದ್ರವ್ಯ ತಯಾರಿಕೆಯಲ್ಲಿ ಈ ಹೂವಿನ ದಳಗಳನ್ನು ಬಳಸುತ್ತಾರೆ. ಮರದ ತೊಲೆಗಳನ್ನು ಪಾಲಿಷ್ ಮಾಡಲು ಎಲೆಗಳನ್ನು ಬಳಸುತ್ತಾರೆ. ಮರದ ತೊಗಟೆಯಿಂದ ಟ್ಯಾನಿನ್ ತಯಾರಿಸುತ್ತಾರೆ.

**ಔಷಧೀಯ ಉಪಯೋಗಗಳು:** ಬೀಜದಪುಡಿಯನ್ನು ಜೀರ್ಣಾಂಗಗಳ ತೊಂದರೆಗೆ ಜಾಂಡಿಸ್ ಹಾಗೂ ಮಲಬದ್ಧತೆಯ ತೊಂದರೆಗಳಿಗೆ, ಎಲೆಗಳ ರಸವನ್ನು ಜ್ವರಕ್ಕೆ ಔಷಧಿಯಾಗಿ ಉಪಯೋಗಿಸುತ್ತಾರೆ. ಕೀಲು ನೋವು, ತಲೆಹೊಟ್ಟು, ಮೂಲವ್ಯಾಧಿ, ಚರ್ಮರೋಗ, ನಾನಾ ರೀತಿಯ ಜ್ವರ, ಯಕೃತ್ತಿನ ರೋಗ, ಕರುಳಿನ ಹುಳು ನಿವಾರಣೆಗೆ ಪಾರಿಜಾತದ ಎಲೆಗಳನ್ನು ಔಷಧಿಯಾಗಿ ಬಳಸುತ್ತಾರೆ.



ಛಾಯಾ ಓಕ್ ಬಾಪಟ್



## ಅನಂತಪಥ

Editorial Advisory Committee: **Tejaswini Ananthkumar / Gopal T.S / K. Janardhana Thunga**
Layout: **Ananthakumar Pratishthana** Assistance: **Sanjay R / Trivikram Joshi / Madhumathi Kumbaluru**
Inputs: **Poornaprajna / Srikanth K / Veena Vittal / Prakash N**
Photographs: **Venkatesh Murthy / Gopal TS / Chakrapani Kengeri / Internet Sources**
Acknowledgements: **Raghavendra Prasad / Krishna Sampagaonkar / Chaya Bapat**
Sketch: **Rashmi Killedar / Raghupathi Sringeri** Printed at: **Rashtrothana Mudranalaya, Chamrajpet, Bengaluru**
Published by: **Tejaswini Ananthkumar**

For-AnanthKumar Pratishthana # 12, Sumeru, M N Krishna Rao Road, Basavanagudi, Bangalore-04
Ph: 080 26568484 I Email: ananth.path@akp.org.in

ಸ್ಪಷ್ಟನೆ: ಆನಂತಪಥದಲ್ಲಿ ಪ್ರಕಟವಾಗಿರುವ ಲೇಖನಗಳ ವಿಚಾರ, ನಿಲುವು, ಅಭಿಪ್ರಾಯಗಳು ಆಯಾ ಲೇಖಕರವು:ಈ ಪತ್ರ್ಯಾಂಶಗಳೆಲ್ಲ ಅನಂತಕುಮಾರ್ ಪ್ರತಿಷ್ಠಾನದ ಅಭಿಪ್ರಾಯಗಳೇ ಎಂದು ಭಾವಿಸುವ ಅಗತ್ಯವಿಲ್ಲ.
**ಸೂಚನೆ:** ಓದುಗರ ವಿಭಾಗಕ್ಕೆ ನೀವೂ ಪತ್ರಗಳನ್ನು ಬರೆಯಬಹುದು: ವಾಟ್ಸ್ ಆಪ್ ಇಲ್ಲವೇ ಮೊಬೈಲ್ ಸಂದೇಶದ ಮೂಲಕ ಅಭಿಪ್ರಾಯಗಳನ್ನು ಕಳುಹಿಸುವಿರಾದರೆ 8884182415 ಈ ಸಂಖ್ಯೆಯನ್ನು ಸಂಪರ್ಕಿಸಿ
To get a e-version of this periodical SMS your name and place to 8884182415

ವ್ಯಕ್ತಿ ವಿಶೇಷ ಮಾಲಿಕೆ

# ಭಾರತದ ಮೊದಲ ವೈದ್ಯೆ – ಆನಂದಿಬಾಯಿ ಜೋಶಿ

ಸಂಪ್ರದಾಯವಾದದ ಹಿಡಿತದ ಕಾಲ ಎಂದು ಹೇಳಲಾದ ಹತ್ತೊಂಭತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ಕೇವಲ 22 ವರ್ಷ ಬದುಕಿದ್ದ, ಸಂಪ್ರದಾಯಸ್ಥ ಚಿತ್ಪಾವನ ಬ್ರಾಹ್ಮಣ ಮನೆತನದ ಹೆಣ್ಣುಮಗಳೊಬ್ಬಳು ಅಸಂಖ್ಯಾತ ಮಹಿಳೆಯರಿಗೆ ದಾರಿದೀಪವಾದದ್ದಾರೂ ಹೇಗೆ? ನೂರ ಮೂವತ್ತು ವರ್ಷ ಕಳೆದ ಮೇಲೆಯೂ ಆಕೆಯ ಬಗ್ಗೆ ಒಂದು ಸಿನಿಮಾ ತಯಾರಿಸುವಷ್ಟು ಕುತೂಹಲ ಉಳಿದ್ದಾದರೂ ಹೇಗೆ?

ಹೌದು, ಆಕೆ ಆನಂದಿಬಾಯಿ ಜೋಶಿ, 31/03/1865ರಲ್ಲಿ ಮುಂಬಯಿಯಲ್ಲಿ ಜನಿಸಿದ ಆಕೆಯ ವಿವಾಹಪೂರ್ವ ಹೆಸರು ಯಮುನಾ. ಒಂಭತ್ತು ವರ್ಷದ ಎಳೆ ವಯಸ್ಸಿನಲ್ಲಿ ಕಲ್ಯಾಣದಲ್ಲಿ ಅಂಚೆ ಇಲಾಖೆಯಲ್ಲಿ ಗುಮಾಸ್ತರಾಗಿದ್ದ ಗೋಪಾಲರಾವ್ ಜೋಶಿಯನ್ನು ಮದುವೆಯಾದರು. ಯಮುನಾರಿಗಿಂತ 22 ವರ್ಷ ಹಿರಿಯರಾಗಿದ್ದ ಗೋಪಾಲರಾವ್ ಜೋಶಿಯವರಿಗೆ ಅದು ಎರಡನೇ ವಿವಾಹ. ಮದುವೆಯ ನಂತರ ಆನಂದಿಬಾಯಿ ಎಂದು ಅವರಿಗೆ ಪುನರ್ನಾಮಕರಣ ಮಾಡಲಾಯಿತು. ಪ್ರಗತಿಶೀಲ ಚಿಂತಕರಾಗಿದ್ದ ಪತಿಯ ಒತ್ತಾಸೆಯಿಂದ ವಿವಾಹದ ನಂತರ ವಿದ್ಯಾಭ್ಯಾಸವನ್ನು ಸಮಾಜದ ವಿರೋಧದ ನಡುವೆಯೂ ಪ್ರಾರಂಭಿಸಿದರು.

ಈ ಮಧ್ಯೆ, ಪತಿಗೆ ಅಲಿಬಾಗ್ ಮತ್ತು ಕೊಲ್ಲಾಪುರಗಳಿಗೆ ವರ್ಗವಾಯಿತು. ಪತಿಯನ್ನು ಹಿಂಬಾಲಿಸಿದ ಆನಂದಿಬಾಯಿ ಹದಿನಾಲ್ಕು ವರ್ಷಕ್ಕೆ ಗರ್ಭಿಣಿಯಾದರು. ಹುಟ್ಟಿದ ಗಂಡು ಮಗು ವೈದ್ಯಕೀಯ ಸೌಲಭ್ಯಗಳ ಕೊರತೆಯಿಂದ ಹತ್ತು ದಿನಗಳಲ್ಲಿಯೇ ಕೊನೆಯುಸಿರೆಳೆಯಿತು. ಇದರಿಂದ ನೊಂದ ಆನಂದಿಬಾಯಿ, ತಾನೇ ವೈದ್ಯಕೀಯ ಶಿಕ್ಷಣ ಪಡೆದು ತನ್ನದೇ ಸ್ಥಿತಿಯಲ್ಲಿದ್ದ ಹೆಣ್ಣುಮಕ್ಕಳಿಗೆ ನೆರವಾಗುವ ನಿರ್ಧಾರ ತೆಗೆದುಕೊಂಡರು. ಆದರೆ ಹೆಚ್ಚಿನ ಕಲಿಕೆಗೆ ಮಹಾರಾಷ್ಟ್ರದ ಮಿಶನರಿ ಶಾಲೆಗಳಲ್ಲಿ ಪ್ರವೇಶ ಸಿಗದಿದ್ದಾಗ ಕಲ್ಕತ್ತಾ ನಗರಕ್ಕೆ ತೆರಳಿ ಇಂಗ್ಲಿಷ್ ಮತ್ತು ಸಂಸ್ಕೃತ ಭಾಷೆಗಳನ್ನು ಅಧ್ಯಯನ ಮಾಡಿದರು.

ಆಗ ಸೆರಾಂಪುರದಲ್ಲಿ ಉದ್ಯೋಗದಲ್ಲಿದ್ದ ಗೋಪಾಲರಾವ್, ವೈದ್ಯೆಯಾಗಬೇಕೆಂಬ ತನ್ನ ಪತ್ನಿಯ ಆಸೆಯನ್ನು ನೆರವೇರಿಸಲು ರಾಯಲ್ ವೈಲ್ಡರ್ ಎಂಬ ಪರಿಚಿತ ಅಮೆರಿಕನ್ ಮಿಶನರಿಯೊಬ್ಬರಿಗೆ ಪತ್ರ ಬರೆದರು. ಅವರು ಆ ಪತ್ರವನ್ನು ಪ್ರಿನ್ಸ್‌ಟನ್ ಮಿಶನರಿ ರಿವ್ಯೂ ಪತ್ರಿಕೆಯಲ್ಲಿ ಪ್ರಕಟಿಸಿದರು. ನ್ಯೂಜರ್ಸಿಯಲ್ಲಿ ದಂತವೈದ್ಯರೊಬ್ಬರ ಬಳಿ ಚಿಕಿತ್ಸೆಗಾಗಿ ಕಾಯುತ್ತಿದ್ದ ಥಿಯೋಡೋರ್ ಕಾರ್ಪೆಂಟರ್ ಎಂಬ ಮಹಿಳೆ ಆ ಪತ್ರವನ್ನು ಓದಿದರು. ಆನಂದಿಬಾಯಿಯವರನ್ನು ಅಮೆರಿಕಕ್ಕೆ ಆಹ್ವಾನಿಸಿದರು.

ಕಲ್ಕತ್ತಾದಲ್ಲಿದ್ದಾಗ ಆನಂದಿಬಾಯಿಯವರ ಆರೋಗ್ಯ ಪದೇಪದೇ ಕ್ಷೀಣಿಸುತ್ತಿತ್ತು. ಆದರೂ ಪತಿಯ ಒತ್ತಾಯಕ್ಕೆ ಮಣಿದು ಅಮೆರಿಕಕ್ಕೆ ತೆರಳಿ ವೈದ್ಯಕೀಯ ಶಿಕ್ಷಣ ಪಡೆಯಲು ನಿರ್ಧರಿಸಿದರು. ಆದರೆ ಅವರ ನಿರ್ಧಾರಕ್ಕೆ ಹಣಕಾಸಿನ ಅಡಚಣೆ, ಜೊತೆಗೆ ಮಹಿಳೆಯೊಬ್ಬಳ ವಿದೇಶಪ್ರವಾಸಕ್ಕೆ ಸಂಪ್ರದಾಯವಾದಿಗಳ ಆಕ್ಷೇಪಣೆ! ಧೃತಿಗೆಡದ ಆನಂದಿಬಾಯಿ, ಸೆರಾಂಪುರ ಕಾಲೇಜ್ ಸಭಾಂಗಣದಲ್ಲಿ ಜನರನ್ನುದ್ದೇಶಿಸಿ "ನಾನು ವೈದ್ಯಕೀಯ ಶಿಕ್ಷಣ ಪಡೆಯಲು ಅಮೆರಿಕಕ್ಕೆ ಹೋಗಲು ಬಯಸುತ್ತಿದ್ದೇನೆ. ಯುರೋಪಿಯನ್ ಆಗಲಿ, ಭಾರತೀಯರಾಗಲಿ, ಮಹಿಳೆಯರು ತುರ್ತು ಚಿಕಿತ್ಸೆ ಅಗತ್ಯವಿದ್ದಾಗಲೂ ಪುರುಷ ವೈದ್ಯರಿಂದ ಚಿಕಿತ್ಸೆ ಪಡೆಯಲು ಸಹಜವಾಗಿಯೇ ಹಿಂಜರಿಯುತ್ತಾರೆ. ಆದುದರಿಂದ ಭಾರತದಲ್ಲಿ ಮಹಿಳಾ ವೈದ್ಯರ ಅಗತ್ಯವಿದೆ ಎಂಬುದು ನನ್ನ ವಿನಮ್ರ ಅಭಿಪ್ರಾಯ. ಆದುದರಿಂದ ನಾನು ವೈದ್ಯಳಾಗಬಯಸುತ್ತೇನೆ" ಎಂದು ಭಾವಪೂರ್ಣ ಭಾಷಣ ಮಾಡಿದರು. ತದನಂತರ, ಆಕೆಗೆ ಅನೇಕ ಕಡೆಗಳಿಂದ ಧನಸಹಾಯ ಒದಗಿಬಂದಿತು. ಅಂದಿನ ವೈಸರಾಯ್ ಲಾರ್ಡ್ ರಿಪ್ಪನ್ ಕೂಡ ಇನ್ನೂರು ರೂಪಾಯಿ ಕಳಿಸಿದ್ದರು.

ಸಹಾಯಹಸ್ತ ಚಾಚುವ ಮುನ್ನ ದಂಪತಿಗಳು ಕ್ರೈಸ್ತಮತಕ್ಕೆ ಮತಾಂತರಗೊಳ್ಳಬೇಕೆಂಬ ಷರತ್ತನ್ನು ರಾಯಲ್ ವೈಲ್ಡರ್ ವಿಧಿಸಿದ್ದರು. ಆದರೆ ಈ ಪ್ರಸ್ತಾಪವನ್ನು ಇಬ್ಬರೂ ನಿರಾಕರಿಸಿದರು. "ನನ್ನ ಸ್ನೇಹಿತರು ಮತ್ತು ಸಮಾಜಬಾಂಧವರ ವಿರೋಧದ ನಡುವೆಯೂ ವೈದ್ಯಕೀಯ ಶಿಕ್ಷಣ ಪಡೆಯುವ ದೃಢನಿರ್ಧಾರದಿಂದ ನಾನು ಅಮೆರಿಕಕ್ಕೆ ಬಂದಿದ್ದೇನೆ. ನನ್ನ ದೇಶದ ಬಡ ಮಹಿಳೆಯರಿಗೆ ಸಹಾಯದ ಅಗತ್ಯವಿದೆ. ಅವರು ಪುರುಷವೈದ್ಯರಿಂದ ಚಿಕಿತ್ಸೆ ಪಡೆಯುವುದಕ್ಕಿಂತ ಸಾಯುವುದೇ ಮೇಲು ಎಂದು ಭಾವಿಸುತ್ತಾರೆ" ಎಂದು ಸ್ಪಷ್ಟವಾಗಿ ಹೇಳಿದ ಅವರು ಮತಾಂತರಗೊಂಡು ವಿದೇಶಿ ಪೋಷಾಕು ಧರಿಸುವುದರಿಂದ ಅನುಕೂಲಗಳಿದ್ದರೂ ತನ್ನ ದೇಶದ, ತನ್ನ ಸಮಾಜದ ಮಹಿಳೆಯರ ವಿಶ್ವಾಸವನ್ನು ಗೆಲ್ಲಲು ಅದರಿಂದ ತೊಡಕುಂಟಾಗುತ್ತದೆಯೆಂದು ಭಾವಿಸಿದ್ದರು. ಜೂನ್ 1883ರಲ್ಲಿ ಸಮುದ್ರಮಾರ್ಗದ ಮೂಲಕ ಅಮೆರಿಕ ತಲುಪಿದ ಆನಂದಿಬಾಯಿ, ಥೋರ್ಬೋರ್ನ್ ಅವರ ಸಲಹೆಯ ಮೇರೆಗೆ ಪೆನ್ಸಿಲ್ವೇನಿಯಾದ ವಿಮೆನ್ಸ್ ಮೆಡಿಕಲ್ ಕಾಲೇಜನ್ನು ಸೇರಿ ತಮ್ಮ ಹತ್ತೊಂಭತ್ತನೆಯ ವಯಸ್ಸಿಗೆ ವೈದ್ಯಕೀಯ ವ್ಯಾಸಂಗ ಪ್ರಾರಂಭಿಸಿದರು. ೧೮೮೬ರಲ್ಲಿ "ಆರ್ಯನ್ ಹಿಂದುಗಳಲ್ಲಿ ಪ್ರಸೂತಿಶಾಸ್ತ್ರ" ಎಂಬ ಪ್ರೌಢ ಪ್ರಬಂಧ ಬರೆಯುವುದರೊಂದಿಗೆ ಎಂಡಿ ಪದವಿಯನ್ನೂ ಗಳಿಸಿದರು. ಈ ನಿಟ್ಟಿನಲ್ಲಿ ಅಮೆರಿಕನ್ ವೈದ್ಯಕೀಯ ಮತ್ತು ಆಯುರ್ವೇದ ಪುಸ್ತಕಗಳನ್ನೂ ಓದಿಕೊಂಡಿದ್ದರು.



11/03/1886ರಂದು ನಡೆದ ಪದವಿಪ್ರದಾನ ಸಮಾರಂಭದಲ್ಲಿ ಕಾಲೇಜಿನ ಅಧ್ಯಕ್ಷರು "ಈ ದಿನವನ್ನು ಕಾಲೇಜಿನ ಚರಿತ್ರೆಯ ಪುಟಗಳಲ್ಲಿ ಸುವರ್ಣಾಕ್ಷರಗಳಿಂದ ದಾಖಲಿಸಬೇಕು. ಈ ದಿನ ಮೊತ್ತಮೊದಲ ಭಾರತೀಯ ಮಹಿಳೆ ವೈದ್ಯಕೀಯ ಪದವಿ ಪಡೆದು ನಮ್ಮ ಕಾಲೇಜಿಗೆ ಗೌರವ ತಂದಿದ್ದಾರೆ. ಶ್ರೀಮತಿ ಆನಂದಿ ಜೋಶಿ, ಭಾರತದ ಮೊತ್ತಮೊದಲ ಮಹಿಳಾ ವೈದ್ಯೆ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ" ಎಂದು ಘೋಷಣೆ ಮಾಡಿದಾಗ ಇಡೀ ಸಭೆಯೇ ಎದ್ದು ನಿಂತು ಗೌರವ ಸೂಚಿಸಿತು. ಆನಂದಿಬಾಯಿಯವರ ಸಾಧನೆಗೆ ಇಂಗ್ಲೆಂಡಿನ ವಿಕ್ಟೋರಿಯಾ ರಾಣಿ ಕೂಡ ಅಭಿನಂದನೆ ಸಲ್ಲಿಸಿದರು.

1886ರಕೊನೆಯಲ್ಲಿ ಭಾರತಕ್ಕೆ ಆಗಮಿಸಿದ ಆನಂದಿಬಾಯಿಯವರಿಗೆ ಭವ್ಯ ಸ್ವಾಗತ ದೊರೆಯಿತು. ಅವರು ಕೊಲ್ಲಾಪುರ ಸಂಸ್ಥಾನದ ಆಲ್ಬರ್ಟ್ ಎಡ್ವರ್ಡ್ ಆಸ್ಪತ್ರೆಯ ಮಹಿಳಾವಾರ್ಡಿನ ಪ್ರಭಾರಿಯಾಗಿ ನಿಯುಕ್ತರಾದರು.

ಭಾರತಕ್ಕೆ ಹಿಂದಿರುವಾಗಲೇ ತೀವ್ರವಾಗಿ ಅನಾರೋಗ್ಯಪೀಡಿತರಾಗಿದ್ದ ಆನಂದಿಬಾಯಿಯವರು ಮತ್ತೆ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದರು. ಇದನ್ನು ತಿಳಿದ ಗೋಖಲೆಯವರು, "ಎಲ್ಲ ಕಷ್ಟಗಳ ನಡುವೆಯೂ ನೀವು ವಿದೇಶಕ್ಕೆ ಹೋಗಿ ಶ್ರದ್ಧೆಯಿಂದ ಶಿಕ್ಷಣ ಪಡೆದು ಮರಳಿದ ವಿಚಾರ ನನಗೆ ತಿಳಿದಿದೆ. ಆಧುನಿಕ ಭಾರತದ ಮಹಾನ್ ಮಹಿಳೆಯರಲ್ಲಿ ನೀವೊಬ್ಬರು. ನಿಮಗೆ ಹಣಕಾಸಿನ ತೊಂದರೆಯಿದೆ ಎಂದು ತಿಳಿಯಿತು. ನಾನೊಬ್ಬ ಪತ್ರಿಕಾ ಸಂಪಾದಕ. ನನಗೆ ದೊಡ್ಡ ಆದಾಯವೇನೂ ಇಲ್ಲ. ಆದರೂ ನಾನು ನಿಮಗೆ 100 ರೂಪಾಯಿ ನೀಡಲು ಬಯಸುತ್ತೇನೆ" ಎಂದು ಬರೆದರು. ತಿಲಕರ ಪತ್ರವನ್ನು ಓದಿದ ಆನಂದಿಬಾಯಿ, "ಈ ಬಡತನ, ಈ ಭಿಕ್ಷಾಯಾಚನೆ, ಬೇಡ, ಬೇಡ, ನಾನಿನ್ನು ತಾಳಿಕೊಳ್ಳಲಾರೆ. ನಾನು ಏನಾಗಿದ್ದೆ, ಈಗ ಏನಾಗಿದ್ದೇನೆ? ನಾನೊಬ್ಬ ತಿರುಪೆಯವನ ಮಗಳಲ್ಲ, ನಾನು ಭೂಮಾಲಿಕನೊಬ್ಬನ ಮಗಳು. ಜನರು ನನ್ನ ಮೇಲೆ ಕರುಣೆತೋರಿ, ನನ್ನ ದೈನಂದಿನ ಖರ್ಚಿಗೂ ಧನಸಹಾಯ ಮಾಡುವ ಸ್ಥಿತಿ ಬಂದಿದೆ. ಇದನ್ನು ಸಹಿಸಿಕೊಂಡು ನಾನು ಹೇಗೆ ಬದುಕಲಿ? ಓ ದೇವರೇ, ನೀನೇಕೆ ಇಷ್ಟು ಕ್ರೂರಿ? ಈ ಎಲ್ಲ ಸಂಕಟದಿಂದ ನನ್ನನ್ನು ಪಾರು ಮಾಡುವುದಿಲ್ಲವೇಕೆ?" ಎಂದು ಅತ್ತು ಬಿಟ್ಟರು. ಇದಾದ ಕೆಲವು ದಿನಗಳಲ್ಲಿಯೇ, ಅಂದರೆ 26/02/1887ರಂದು ಆ ಸ್ವಾಭಿಮಾನಿ ಮಹಿಳೆ ಇಹಲೋಕ ತ್ಯಜಿಸಿದರು. ಆಗ ಅವರಿಗಿನ್ನೂ ಇಪ್ಪತ್ತೆರಡು ತುಂಬಿರಲಿಲ್ಲ.

ಅವರ ನಿಧನದ ವಾರ್ತೆಯನ್ನು ತಿಳಿದ ಶ್ರೀಮತಿ ಕಾರ್ಪೆಂಟರ್, ಅವರ ಚಿತಾಭಸ್ಮವನ್ನು ಅಮೆರಿಕಕ್ಕೆ ತರಿಸಿಕೊಂಡು ಫಿಲಿಪ್ಸಿಯಲ್ಲಿದ್ದ ತಮ್ಮ ಕುಟುಂಬದ ಸ್ಮಶಾನದಲ್ಲಿ ಸಮಾಧಿ ಮಾಡಿ "ಆನಂದಿ ಜೋಶಿ, ಎಂಡಿ (೧೮೬೫-೧೮೮೭): ವಿದ್ಯಾಭ್ಯಾಸಕ್ಕಾಗಿ ಭಾರತದಿಂದ ಹೊರಬಂದ ಮೊದಲ ಬ್ರಾಹ್ಮಣ ಮಹಿಳೆ" ಎಂಬ ಸಮಾಧಿಲೇಖವನ್ನು ಬರೆಸಿದರು.

ಏಳು ಭಾಷೆಗಳಲ್ಲಿ ವ್ಯವಹರಿಸಬಲ್ಲವರಾಗಿದ್ದ ಆನಂದಿಬಾಯಿ ತಮ್ಮ ಜೀವನದ ಕೊನೆಯ ದಿನದ ವರೆಗೂ ಅಧ್ಯಯನದಲ್ಲಿ ನಿರತರಾಗಿದ್ದರು. ಹಣತೆಯೊಂದು ತಾನೂ ಬೆಳಗುವುದಲ್ಲದೆ ಇತರ ಹಣತೆಗಳನ್ನೂ ಹಚ್ಚಲು ನೆರವಾಗುವಂತೆ ಆನಂದಿಬಾಯಿ ಇಂದಿಗೂ ಸಾವಿರಾರು ಹೆಣ್ಣು ಮಕ್ಕಳಲ್ಲಿ ಸಾಧನೆಯ ಸಂಕಲ್ಪವನ್ನು ಬೆಳೆಸಿದ್ದಾರೆ. ಅವರ ನೆನಪಿನಲ್ಲಿ ಐಆರ್‌ಡಿಎಸ್ (Institute of Research & Documentation in Social Sciences) ಸಂಸ್ಥೆಯು ಆನಂದಿ ಜೋಶಿ ಪ್ರಶಸ್ತಿಯನ್ನು ನೀಡುತ್ತಿದೆ. ಆಕೆಯ ಜೀವನ ಚರಿತ್ರೆ ಚಲನಚಿತ್ರವಾಗಿ ದಾಖಲಾಗಿದೆ. ಗೂಗಲ್ ಕೂಡ ಆಕೆಗೆ ಡೂಡಲ್ ಗೌರವ ಸಲ್ಲಿಸಿದೆ.

-ಕೆ. ಜನಾರ್ದನ ತುಂಗ





# ಅದಮ್ಯಚೇತನ ತಿಂಗಳ ವರದಿ (15 ಜನವರಿ 2023 ರಿಂದ 15 ಫೆಬ್ರವರಿ 2023)

**ಕೃಷಿ ಮೇಳದಲ್ಲಿ ಅದಮ್ಯ ಚೇತನದ ಪ್ಲೇಟ್ ಬ್ಯಾಂಕ್-** ಕೃಷಿ ಇಲಾಖೆಯ ಆಶ್ರಯದಲ್ಲಿ ಅರಮನೆ ಮೈದಾನದಲ್ಲಿ ಆಯೋಜಿತವಾಗಿದ್ದ ಕೃಷಿ ಮೇಳಕ್ಕೆ ಅದಮ್ಯ ಚೇತನದ ಪ್ಲೇಟ್ ಬ್ಯಾಂಕಿನಿಂದ ಲೋಟ, ತಟ್ಟೆ, ಚಮಚಗಳನ್ನು ಒದಗಿಸಲಾಗಿತ್ತು.

ಮೇಳದಲ್ಲಿ ಒಟ್ಟು 16,500 ಜನರು ಭೋಜನ ಮಾಡಿದ್ದರೂ ಎಲ್ಲಿಯೂ ತ್ಯಾಜ್ಯ ಸಂಗ್ರಹವಾಗದಿದ್ದುದು ವಿಶೇಷವಾಗಿತ್ತು. ಅಧಿಕಾರಿಗಳು, ಅತಿಥಿಗಳು, ಮಾಧ್ಯಮದವರು ಸೇರಿದಂತೆ ಎಲ್ಲರೂ ತಮ್ಮ ತಮ್ಮ ತಟ್ಟೆ ಲೋಟ ಮತ್ತು ಚಮಚಗಳನ್ನು ವಿಂಗಡಿಸಿ ಸ್ವಚ್ಛತೆಯ ಕಡೆ ಗಮನ ಹರಿಸಿದ್ದರು. ಅದಮ್ಯ ಚೇತನ ಸಂಸ್ಥೆಯ ಶೂನ್ಯ ತ್ಯಾಜ್ಯ ಅಭಿಯಾನಕ್ಕೆ ಸಂದ ಗೌರವವಿದು ಎಂದರೆ ತಪ್ಪಾಗಲಾರದು.

"ಈ ಕೃಷಿ ಮೇಳದಲ್ಲಿ ಅದಮ್ಯ ಚೇತನದ ಪ್ಲೇಟ್ ಬ್ಯಾಂಕ್ ಬಳಕೆಯಿಂದ ಕೃಷಿ ಇಲಾಖೆಗೆ ಲಕ್ಷಾಂತರ ರೂಪಾಯಿಗಳ ಹಣ ಉಳಿತಾಯವಾಗಿದೆ. ಜೊತೆಗೆ ಬಿಬಿಎಂಪಿಗೆ ಟನ್‌ಗಟ್ಟಲೇ ಕಸ ಕಡಿಮೆ ಆಯಿತು ಮತ್ತು ಅರಮನೆ ಆವರಣದಲ್ಲಿ ಎಲ್ಲಾ ಕಡೆ ಬಹಳ ಸ್ವಚ್ಛತೆ ಕಂಡು ಬಂದಿತು." ಎಂದು ಎಲ್ಲ ಅಧಿಕಾರಿಗಳು ಕೃತಜ್ಞತೆಯನ್ನು ವ್ಯಕ್ತ ಪಡಿಸಿದರು. ಅದಮ್ಯ ಚೇತನವನ್ನು ಒಂದು ಆದರ್ಶ ಸಂಸ್ಥೆಯಾಗಿ ಮಾಡಲು ಶ್ರಮಿಸುತ್ತಿರುವ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಅವರಿಗೂ ಮತ್ತು ಎಲ್ಲಾ ಸಿಬ್ಬಂದಿ ವರ್ಗದವರಿಗೂ ಅಭಿನಂದನೆಗಳನ್ನು ಕೃಷಿ ಇಲಾಖೆ ಸಿಬ್ಬಂದಿಗಳು ತಿಳಿಸಿದರು.

ಅದಮ್ಯ ಚೇತನದ ಪೌಷ್ಟಿಕ ಸಾತ್ವಿಕ ಆಹಾರದ ಆಂದೋಲನದ ಪ್ರದರ್ಶನ ಮಳಿಗೆ ಕೂಡ ಕೃಷಿ ಮೇಳದ ಪ್ರಮುಖ ಆಕರ್ಷಣೆಯಾಗಿತ್ತು. ಪ್ಲೇಟ್ ಬ್ಯಾಂಕ್ ಮತ್ತು ಸಿರಿಧಾನ್ಯ ಮಳಿಗೆ ನಿರ್ವಹಣೆಯಲ್ಲಿ ಅದಮ್ಯ ಚೇತನದ ಸಿಬ್ಬಂದಿ ವರ್ಗದವರಾದ ರಾಜಲಕ್ಷ್ಮೀ, ಶ್ರೀನಿಧಿ, ಮುತ್ತಣ್ಣ, ಗಿರೀಶ್, ಮಹಾಂತೇಶ್ ಗ್ರೀನ್ ವಾರಿಯರ್ ಪ್ರಕಾಶ್, ಸ್ವಯಂ ಸೇವಕರಾದ ಸುಜಾತ, ವನಿತಾ ಹೆಗಡೆ, ಗೀತಾ ಗಣೇಶ್, ಹಾಗೂ ಶಾರದಾ ಪ್ರಕಾಶ್ ಭಾಗವಹಿಸಿದ್ದರು.

**ಎ-ಚಾಟ್‌ನಲ್ಲಿ ಮೇಳೈಸಿದ ಸಾಂಸ್ಕೃತಿಕ ಕಲರವ-** ಅನಂತಕುಮಾರ್ ಸಾಂಸ್ಕೃತಿಕ ಕೇಂದ್ರ ಮತ್ತು ಕರ್ನಾಟಕ ಆರ್ಯ ವೈಶ್ಯ ಸಾಹಿತ್ಯ ಪರಿಷತ್ತಿನ ಸಹಯೋಗದಲ್ಲಿ ಜನವರಿ ತಿಂಗಳ ಎ-ಚಾಟ್ ಸಾಂಸ್ಕೃತಿಕ ಕಾರ್ಯಕ್ರಮವನ್ನು ವಿವಿ ಪುರಂ ಮಾನಂದಿ ನಂಜುಂಡ ಶೆಟ್ಟಿ ಸಭಾಂಗಣದಲ್ಲಿ ಆಯೋಜನೆ ಮಾಡಲಾಗಿತ್ತು.

ಈ ಸಂದರ್ಭದಲ್ಲಿ ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಮಾತನಾಡಿ, ಎಲೆಮರೆಯ ಕಾಯಿಯಂತೆ ಇರುವ ಪ್ರತಿಭೆಗಳನ್ನು ಮುಖ್ಯವಾಹಿನಿಗೆ ತರುವ ನಿಟ್ಟಿನಲ್ಲಿ ಅನಂತಕುಮಾರ್ ಪ್ರತಿಷ್ಠಾನ, ಅನಂತ ಪ್ರೇರಣಾ ಕೇಂದ್ರ ಮತ್ತು ಅದಮ್ಯ ಚೇತನದ ವತಿಯಿಂದ ಎ-ಚಾಟ್ ಕಾರ್ಯಕ್ರಮವನ್ನು ಆಯೋಜನೆ ಮಾಡಿಕೊಂಡು ಬರಲಾಗುತ್ತಿದೆ. ಇದಕ್ಕೆ ಎಲ್ಲ ಕಲಾವಿದರ ಸಹಕಾರ ಮತ್ತು ಹಿರಿಯರ ಆಶೀರ್ವಾದ ದೊರೆಯುತ್ತಿರುವುದು ಸಂತೋಷದ ಸಂಗತಿ ಎಂದರು.

ಕೀರ್ತನಾ ಜೋಶಿ ಎಂಬ ಪುಟಾಣಿ ಹುಡುಗಿಯ ಪ್ರಾರ್ಥನೆಯಿಂದ ಪ್ರಾರಂಭವಾದ ಕಾರ್ಯಕ್ರಮದಲ್ಲಿ ಸಹಬಾಳ್ವೆ ಸಂಸ್ಥೆಯ ನಿರ್ದೇಶಕ, ಯೋಗಗುರು, ಡಾ. ರಾಘವೇಂದ್ರ ಪ್ರಸಾದ್ ಅವರು ಸೂರ್ಯ ನಮಸ್ಕಾರ ಮತ್ತು ಅದರ ಪ್ರಯೋಜನಗಳನ್ನು ಪರಿಚಯ ಮಾಡಿಕೊಟ್ಟರು. ನಂತರ ಸ್ವರ ಮಾಧುರ್ಯ ತಂಡದಿಂದ ಸಮೂಹ ಗಾಯನ ನಡೆಯಿತು. ಸುಲಕ್ಷ್ ಎಂಬ ಬಾಲಕ ರೂಬಿಕ್ಯೂಬಿನಲ್ಲಿ ರಚಿಸಿದ ಅನಂತಕುಮಾರ್ ಅವರ ಬಿಂಬ ಎಲ್ಲರ ಮನ ಸೆಳೆಯಿತು. ಕೊನೆಯಲ್ಲಿ ಡಾ. ರಮ್ಯ ಸೂರಜ್ ಅವರ ತಂಡದಿಂದ ನೃತ್ಯ ಪ್ರದರ್ಶನ ನಡೆಯಿತು.

ಅನಂತಕುಮಾರ್ ಪ್ರತಿಷ್ಠಾನದ ಅಧ್ಯಕ್ಷರಾದ ಶ್ರೀ ಪಿ.ವಿ. ಕೃಷ್ಣಭಟ್, ಅನಂತಪಥ ಪತ್ರಿಕೆಯ ಸಂಪಾದಕರಾದ ಶ್ರೀ ಟಿ. ಎಸ್. ಗೋಪಾಲ್ ಹಾಗೂ ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಕೆ. ಎ. ಎಲ್. ನಟರಾಜ್ ಸೇರಿದಂತೆ ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

**ಶ್ರದ್ಧೆಯ ಶಿಲ್ಪ-** ಮೈಸೂರು ಆಕಾಶವಾಣಿಯಿಂದ ಪ್ರತಿ ಮಂಗಳವಾರ ಪ್ರಸಾರವಾಗುತ್ತಿರುವ ಶ್ರದ್ಧೆಯ ಶಿಲ್ಪ ಎಂಬ ಜನಪ್ರಿಯ ಕಾರ್ಯಕ್ರಮವನ್ನು ಅದಮ್ಯ ಚೇತನ ಸಂಸ್ಥೆ ಪ್ರಾಯೋಜಿಸುತ್ತಿದೆ. ಈ ಮಾಲಿಕೆಯನ್ನು ಬರೆದು ಪ್ರಸ್ತುತಪಡಿಸುತ್ತಿರುವವರು ಶ್ರೀ ಟಿ ಎಸ್ ಗೋಪಾಲ್.

## "ಏಕಾಗ್ರತೆ ಇದ್ದರೆ ಯಶಸ್ಸು ನಿಶ್ಚಿತ"

ಅನಂತಪಥ ಪತ್ರಿಕೆ 31ನೇ ಸಂಚಿಕೆಯನ್ನು ಏರ್ ಮಾರ್ಷಲ್ ಫಿಲಿಪ್ ರಾಜಕುಮಾರ್ ಅವರು ಬಿಡುಗಡೆ ಮಾಡಿದರು. ಹಾಗೂ ಇದೇ ಸಂದರ್ಭದಲ್ಲಿ ದೇಶದಲ್ಲಿಯೇ ಏಕೈಕವಾದ ಸಂಸ್ಕೃತ ಭಾಷೆಯ ಸುಧರ್ಮಾ ದಿನದರ್ಶಿನಿಯನ್ನು ಶ್ರೀಮತಿ ತೇಜಸ್ವಿನಿ ಅನಂತಕುಮಾರ್ ಬಿಡುಗಡೆಗೊಳಿಸಿದರು.

ಸುಧರ್ಮಾ ಸಂಸ್ಕೃತ ದಿನಪತ್ರಿಕೆಯ ಸಂಪಾದಕರಾದ ಶ್ರೀಮತಿ ಕೆ.ಎಸ್. ಜಯಲಕ್ಷ್ಮಿಯವರು ಮಾತನಾಡಿ, ಅದಮ್ಯ ಚೇತನ ಅದ್ಭುತವಾದ ಕೆಲಸ ಮಾಡುತ್ತಿದೆ. ಬೆಂಗಳೂರು ನಗರ ಒಂದರಲ್ಲಿಯೇ 80 ಸಾವಿರ ಜನಕ್ಕೆ ಪ್ರತಿದಿನ ಮಧ್ಯಾಹ್ನದ ಊಟ ನೀಡುವುದು ಮಹತ್ವದ ಕಾರ್ಯ ಎಂದು ಶ್ಲಾಘಿಸಿದರು.

ನಂತರ ಮಾತನಾಡಿದ ಶ್ರೀಮತಿ ತೇಜಸ್ವಿನಿ ಅನಂತಕುಮಾರ್, "ಏಕಾಗ್ರತೆಯಿಂದ ಯಾವುದೇ ಕೆಲಸ ಮಾಡಿದ್ದರೂ ಅದರ ಯಶಸ್ಸು ನಿಶ್ಚಿತ ಎಂಬುವುದಕ್ಕೆ ಅದಮ್ಯ ಚೇತನ, ಅನಂತಪಥ ಮತ್ತು ಸುಧರ್ಮಾ ಪತ್ರಿಕೆಗಳೇ ನಿದರ್ಶನ. ಎಲ್ಲ ಕೆಲಸಗಳನ್ನು ಒಟ್ಟಿಗೆ ತೆಗೆದುಕೊಂಡು ಹೋಗುವ ಮನೋಬಲವಿರಬೇಕು ಎಂದು ಅನಂತಕುಮಾರ್ ಸದಾ ಹೇಳುತ್ತಿದ್ದರು, ಅವರ ಮಾರ್ಗದರ್ಶನದಂತೆಯೇ ನಾವು ಸಾಗುತ್ತಿದ್ದೇವೆ" ಎಂದು ಹೇಳಿದರು. ಎಲ್ಲರೂ ಸಂಸ್ಕೃತದ ಮೊದಲ ಹಾಗೂ ಏಕೈಕ ದಿನಪತ್ರಿಕೆ ಸುಧರ್ಮಾ, ದಿನದರ್ಶಿನಿಯಲ್ಲಿರುವ ವಿಚಾರಗಳು ಮೊದಲಾದ ನಮ್ಮ ಸಂಸ್ಕೃತಿಯನ್ನು ಪ್ರತಿನಿಧಿಸುವ ವಿಷಯಗಳನ್ನು ಓದಿ ತಿಳಿದುಕೊಳ್ಳಬೇಕು ಎಂದೂ ಅವರು ಹೇಳಿದರಿರು.

ಜನವರಿ ತಿಂಗಳ ಅನಂತಪಥದ ಲೇಖನಗಳನ್ನು ಪತ್ರಿಕೆಯ ಸಂಪಾದಕರಾದ ಶ್ರೀ ಟಿ. ಎಸ್. ಗೋಪಾಲ್ ಅವರು ಪರಿಚಯಿಸಿದರು. ಪ್ರಾರಂಭದಲ್ಲಿ ಪ್ರಾರ್ಥನೆಯನ್ನು ಅವಂತಿಕಾ ಎ.ಕೆ. ಮಾಡಿದರು. ಕಾರ್ಯಕ್ರಮವನ್ನು ಶ್ರೀ ಪೂರ್ಣಪ್ರಜ್ಞ ನಿರೂಪಿಸಿದರು. ಕಾರ್ಯಕ್ರಮದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾದ ಡಾ. ಗಣಪತಿ ಭಟ್, ಶ್ರೀ ರಾಮಚಂದ್ರ, ಸೇರಿದಂತೆ ಅನೇಕ ಗಣ್ಯರು ಭಾಗವಹಿಸಿದ್ದರು.

**ಗಣ್ಯರ ಭೇಟಿ-** ಒದಿಶಾ ರಾಜ್ಯದ ಬಿಜೆಪಿ ವಕ್ತಾರ, ಶ್ರೀ ಸುದೀಪ್ತ ಕು ರೇ, ಶ್ರೀಯುತರಾದ ಡಿ. ಎಂ. ಹೆಗಡೆ, ಗೌತಮ್ ಜಿ., ಯೆಲ್ಲೋಜಿ ರಾವ್ ಮಿರಜ್‌ಕರ್, ಭಾರತದ ಏರೋನಾಟಿಕಲ್ ಸೊಸೈಟಿಯ ಉಪಾಧ್ಯಕ್ಷ ಮೋಯಿನ್ ಖಾನ್ ಹಾಗೂ ಕಲೈವಾನನ್ ಸಿ., ಅನಂತಕುಮಾರರ ಆತ್ಮೀಯರೂ ಗುಲ್ಬರ್ಗ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷರೂ ಆದ ದಯಾಘನ್ ಧಾರವಾಡಕರ್, ಸುನೀಲ್ ಕುಮಾರ್ ಕುಲಕರ್ಣಿ, ಗಾಯಕಿ ಸಾಧ್ವಿನಿ ಕೊಪ್ಪ, ಹುಬ್ಬಳ್ಳಿಯ ಉದ್ಯಮಿ, ಶ್ರೀ ಸುಧೀಂದ್ರ ಗುಬ್ಬಿ, ಶ್ರೀ ಕಿರಣ್ ಹೆಗ್ಡೆ ಮುಂತಾದ ಅನೇಕ ಗಣ್ಯರು ಅದಮ್ಯ ಚೇತನ ಮತ್ತು ಅನಂತ ಪ್ರೇರಣಾ ಕೇಂದ್ರಕ್ಕೆ ಭೇಟಿ ನೀಡಿದರು.

**ಹಸಿರು ಭಾನುವಾರ-** ಪರಿಸರ ರಕ್ಷಣೆಯ ದೃಷ್ಟಿಯಿಂದ ಅದಮ್ಯ ಚೇತನ, ಅನಂತಕುಮಾರ್ ಪ್ರತಿಷ್ಠಾನ ಹಾಗೂ ಅನಂತ ಪ್ರೇರಣಾ ಕೇಂದ್ರದ ವತಿಯಿಂದ ಹಸಿರು ಭಾನುವಾರ ಕಾರ್ಯಕ್ರಮವನ್ನು ಆಯೋಜನೆ ಮಾಡಿಕೊಂಡು ಬರಲಾಗುತ್ತಿದೆ. ಅದರಂತೆ 368, 369, 370 , 371 ಮತ್ತು 372 ನೇ ಹಸಿರು ಭಾನುವಾರಗಳನ್ನು ಕ್ರಮವಾಗಿ ಗವಿಪುರದ ಬಂಡೆ ಮಹಾಕಾಳಿ ದೇವಸ್ಥಾನ, ಬೆಂಗಳೂರು ವಿವಿಯ ಬಯೋ ಪಾರ್ಕ್ ಆವರಣ, ಎನ್‌ಜಿಇಎಫ್ ಲೇಔಟ್ ಸುತ್ತಮುತ್ತ ಸಸಿಗಳನ್ನು ನೆಡಲಾಯಿತು. ಸ್ವಯಂ ಸೇವಕರು, ಅದಮ್ಯ ಚೇತನದ ಸಿಬ್ಬಂದಿಗಳು ಹಾಗೂ ಬಿಎಂಎಸ್ ಹಾಗೂ ನೃಪತುಂಗ ಕಾಲೇಜಿನ ವಿದ್ಯಾರ್ಥಿಗಳು ಇದರಲ್ಲಿ ಭಾಗವಹಿಸಿದ್ದರು.

**ಇತರೆ ಚಟುವಟಿಕೆಗಳು-** ಅದಮ್ಯ ಚೇತನವು ವಿವಿಧಕಡೆ ನಡೆಸಿಕೊಂಡು ಬರುತ್ತಿರುವ ನಿತ್ಯ ಅನ್ನದಾನ, ಕಾಲೇಜು ವಿದ್ಯಾರ್ಥಿಗಳಿಗೆ ಊಟ, ಪೌರಕಾರ್ಮಿಕರಿಗೆ ತಟ್ಟೆ ವಿತರಣೆ, ಸಾಯಿ ಅನ್ನಪೂರ್ಣ ಟ್ರಸ್ಟ್ ಸಹಯೋಗದಲ್ಲಿ ಅದಮ್ಯ ಚೇತನ ಅಡುಗೆ ಮನೆಯಿಂದ ಪ್ರತಿದಿನ 265 ಶಾಲೆಗಳಿಗೆ ಬಿಸಿಯೂಟದ ಜೊತೆಗೆ ಚಾಕ್ಲೇಟ್ ಸುವಾಸನೆಯುಳ್ಳ ಪೌಷ್ಟಿಕಾಂಶಯುಕ್ತ ಹಾಲಿನ ವಿತರಣೆ. ಅದಮ್ಯ ಚೇತನದಲ್ಲಿ ಪ್ರತಿ ಮಂಗಳವಾರ ಶ್ರೀಚೇತನ ಸಭೆ, ಗುರುವಾರ ಭಗದ್ಗೀತೆ ಪಠಣ ಹಾಗೂ ಅನಂತ ಪ್ರೇರಣಾ ಕೇಂದ್ರದಲ್ಲಿ ಶನಿವಾರ ಪೌಷ್ಟಿಕ ಸಾತ್ವಿಕ ಆಹಾರ ಮೇಳ ಸೇರಿದಂತೆ ವಿವಿಧ ಕಾರ್ಯಕ್ರಮಗಳೆಲ್ಲವೂ ನಿರಂತರವಾಗಿ ನಡೆದುಕೊಂಡುಬರುತ್ತಿವೆ.

## ಅದಮ್ಯ ಸೇವಾ ( ಅದಮ್ಯ ಚೇತನ - ತಿಂಗಳ ಚಟುವಟಿಕೆಗಳ ಚಿತ್ರಸಂಪುಟ )




ಕರ್ನಾಟಕ ಆರ್ಯವೈಶ್ಯ ಸಾಹಿತ್ಯ ಪರಿಷತ್ತಿನ ಸಹಯೋಗದೊಡನೆ ಬೆಂಗಳೂರಿನ ಮಾನಂದಿ ಸಭಾಂಗಣದಲ್ಲಿ ಎ-ಚಾಟ್ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು




ಗದಗ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದಲ್ಲಿ ಎಂಟು ದಿನಗಳ ಕಾಲ ನಡೆದ ಪ್ರೇರಣಾ ತರಬೇತಿ ಶಿಬಿರದಲ್ಲಿ ಮುಖ್ಯ ಅತಿಥಿಯಾಗಿ ತೇಜಸ್ವಿನಿ ಅನಂತಕುಮಾರ್ ಮಾತನಾಡಿದ ಸಂದರ್ಭ.




ಅದಮ್ಯ ಚೇತನದಲ್ಲಿ ತ್ರಿವರ್ಣ ಧ್ವಜಾರೋಹಣ ಮಾಡುವ ಮೂಲಕ 74ನೇ ಗಣರಾಜ್ಯೋತ್ಸವವನ್ನು ಆಚರಣೆ ಮಾಡಲಾಗಿತ್ತು. ಈ ಸಂದರ್ಭದಲ್ಲಿ ಸಂಸ್ಥೆಯ ಎಲ್ಲ ಸಿಬ್ಬಂದಿಗಳು ಹಾಜರಿದ್ದರು.



ಚಾಮರಾಜಪೇಟೆಯ ಸರ್ಕಾರಿ ಶಾಲೆಯಿಂದ 123 ವಿದ್ಯಾರ್ಥಿಗಳು ಹಾಗೂ 6 ಜನ ಶಿಕ್ಷಕರು ಅದಮ್ಯ ಚೇತನದ ಅನ್ನಪೂರ್ಣ ಅಡುಗೆಮನೆಗೆ ಭೇಟಿ ನೀಡಿ ಅಡುಗೆ ಕಾರ್ಯವನ್ನು ವೀಕ್ಷಣೆ ಮಾಡಿದರು.




ಅದಮ್ಯ ಚೇತನದ ನಿರಂತರ ಸಾಮಾಜಿಕ ಸೇವೆಯನ್ನು ಪರಿಗಣಿಸಿ, ಇತ್ತೀಚೆಗೆ ರೀಥಿಂಕ್ ಇಂಡಿಯಾ ಸಂಸ್ಥೆಯು ದೀನ ದಯಾಳ ಉಪಾಧ್ಯಾಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.



ಅನಂತ ಪ್ರೇರಣಾ ಕೇಂದ್ರಕ್ಕೆ ದೆಹಲಿಯ ಉದ್ಯಮಿಗಳಾದ ಅನುಜ್ ಶರ್ಮ, ಸತ್ಯ ರಾಜ್ ಗುರು ಹಾಗೂ ವಿಜಯ್ ರಾಘವನ್ ಭೇಟಿ ನೀಡಿದರು.




ಅರಮನೆ ಮೈದಾನದಲ್ಲಿ ಆಯೋಜಿತವಾಗಿದ್ದ ಕೃಷಿ ಮೇಳಕ್ಕೆ ಅದಮ್ಯ ಚೇತನದ ಪ್ಲೇಟ್ ಬ್ಯಾಂಕಿನಿಂದ ಲೋಟ, ತಟ್ಟೆ, ಚಮಚಗಳನ್ನು ಒದಗಿಸಲಾಗಿತ್ತು.



ಅಂತಾರಾಷ್ಟ್ರೀಯ ವಿಶ್ವ ಕ್ಯಾನ್ಸರ್ ದಿನದ ಸಂದರ್ಭದಲ್ಲಿ ಅಮೃತ್ ನೋನಿ ಕ್ಯಾನ್ಸಿ-ಕೇರ್ ಉತ್ಪನ್ನವನ್ನು ಮಾರುಕಟ್ಟೆಗೆ ಸಚಿವರಾದ ಡಾ. ಸಿ.ಎನ್. ಅಶ್ವತ್ಥನಾರಾಯಣ ಮತ್ತು ಡಾ. ತೇಜಸ್ವಿನಿ ಅನಂತಕುಮಾರ್ ಅವರು ಬಿಡುಗಡೆ ಮಾಡಿದರು.

## ಅನಂತ ಚಿತ್ರಸಂಪುಟ

ಭಾರತೀಯ ಜನತಾ ಪಕ್ಷದ ಕಾರ್ಯಕರ್ತನಿಂದ ಮೊದಲುಗೊಂಡು ರಾಜ್ಯಾಧ್ಯಕ್ಷ ಪದವಿಯವರೆಗೆ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ ಶ್ರೀ ಅನಂತಕುಮಾರ್ ಚುನಾವಣೆಗಳ ಸಂದರ್ಭದಲ್ಲಿ ನಾಡಿನಾದ್ಯಂತ ಮಿಂಚಿನಂತೆ ಸಂಚರಿಸಿ ಕಾರ್ಯಕರ್ತರನ್ನೂ ಮತದಾರರನ್ನೂ ಹುರಿದುಂಬಿಸುತ್ತಿದ್ದ ಪರಿ ಅನನ್ಯವಾಗಿತ್ತು.























